

ಕುಣಿಯೋಣು ಬಾರ ಕುಣಿಯೋಣು ಬಾ...
ನಾನಲ್ಲ ನೀನಲ್ಲ ನನ್ನಲ್ಲಿ ನೀನಿಲ್ಲ ಸಾವಿಲ್ಲ ನೋವಿಲ್ಲ
ಇದ್ದದ್ದು ಮರೆಯೋಣ, ಇಲ್ಲದ್ದು ತೆರೆಯೋಣ ಹಾಲ್ಜೇನು ಸುರಿಯೋಣ
ಆ ಕ್ಷೀರ ಸಾಗರದಾನಂದ ಸಾಗರ ತೆರಿ ತೆರಿ ತೆರದರ
ಹದಿನಾಲ್ಕು ಲೋಕಕ್ಕೆ ಚಿಮ್ಮಲಿ ಈ ಸುಖ ಹಿಗ್ಗಲಿ ಸಿರಿಮುಖ

ದ. ರಾ. ಬೇಂದ್ರೆ

ನೂಪುರ ಭ್ರಮರಿ, ಸಾನ್ನಿಧ್ಯ ಪ್ರಕಾಶನ, ದೇಚೂರು ರಸ್ತೆ,
ಅಶ್ವತ್ಥಕಟ್ಟೆ ಸಮೀಪ, ಮಡಿಕೇರಿ, ಕೊಡಗು, 571201,
ಫೋನ್ ನಂ 9880592986,
ಇ–ಮೈಲ್ ವಿಳಾಸ: manu.manorama@gmail.com

ಮಾರ್ಚ್ – ಏಪ್ರಿಲ್ ೨೦೦೭



ಸಂಚಿಕೆ – ೨

# ನೂಪುರ ಭ್ರಮರಿ

ನರ್ತನ ಜಗತ್ತಿಗೊಂದು ಪರಿಭ್ರಮಣ

ಖಾಸಗಿ ಪ್ರಸಾರದ ದ್ವೈಮಾಸಿಕ

ಸಂಪಾದಕಿ : ಮನೋರಮಾ ಬಿ. ಎನ್

## ಮಂಜೀರ

**ಪ್ರಿ**ಯರೇ,  ನೂಪುರ ಭ್ರಮರಿ  ಯ ಪ್ರಥಮ ಸಂಚಿಕೆಗೇ ನಿಮ್ಮ ಪ್ರೋತ್ಸಾಹಗಳು ನಮ್ಮ ಬೆನ್ನು ತಟ್ಟಿವೆ. ಪುಟ್ಟ ಪತ್ರಿಕೆಯಾದರೂ ಅದರ ಆಶಯಗಳ ಕುರಿತು ಆಸಕ್ತಿ ತೋರಿ, ತಮ್ಮ ಸಲಹೆ ಸೂಚನೆಗಳನ್ನು ನೀಡಿದ್ದಾರೆ.  ಪ್ರಥಮ ಸಂಚಿಕೆಯೇ ರಾಜ್ಯಾದ್ಯಂತ ಸುಮಾರು ೨೪೦ ಪ್ರಸಾರವನ್ನು ಕಂಡಿವೆ.  ನಿಮ್ಮ ಈ  ನಿರಂತರ ಪ್ರೋತ್ಸಾಹ, ಕಾಳಜಿ ನೂಪುರ ಭ್ರಮರಿಯ ದೀರ್ಘ ಪಯಣದುದ್ದಕ್ಕೂ ಕೈಹಿಡಿದು ಮುನ್ನಡೆಸಲಿ ಎನ್ನುವುದು ನಮ್ಮ ಆಶಯ.

ನೂಪುರ ಭ್ರಮರಿಯ ಪ್ರಥಮ ಸಂಚಿಕೆ ಅನಾವರಣಗೊಂಡದ್ದು ಮಡಿಕೇರಿಯಲ್ಲಿ ಶಿವರಾತ್ರಿ ಅಂಗವಾಗಿ ನೃತ್ಯ ಮಂಟಪ ಟ್ರಸ್ಟ್ ಆಯೋಜಿಸಿದ ನಟರಾಜೋತ್ಸವದಲ್ಲಿ. ಅತಿಥಿಗಳಾಗಿ ಆಗಮಿಸಿದ್ದ  ಶಕ್ತಿ  ದೈನಿಕದ ಸಹಸಂಪಾದಕ ಶ್ರೀಯುತ ಬಿ.ಜಿ.ಅನಂತಶಯನ, ಆಯುರ್ವೇದ ವೈದ್ಯ, ಕವಿ, ಬರಹಗಾರ ನಡೀಬೈಲು ಉದಯಶಂಕರ, ಹಾಗೂ ಗುರು ಶ್ರೀಮತಿ ರೂಪಾ ಶ್ರೀಕೃಷ್ಣ ಉಪಾಧ್ಯ ಅವರು ಪತ್ರಿಕೆಯನ್ನು ಮೊದಲು ತೆರೆದಿಟ್ಟವರು. ಒಂದು ಶುಭ ಸಂದರ್ಭದಲ್ಲಿ ಶುಭಾಂಸನೆ ಪಡೆದುಕೊಂಡ ನೂಪುರ ಭ್ರಮರಿಯ ಯಾತ್ರೆ ನಿರಂತರವಾಗಿ ನಡೆಯಬೇಕೆಂಬುದು ನಮ್ಮೆಲ್ಲರ ಕನಸು.

ಈಗಾಗಲೇ  ಪತ್ರಿಕೆ ವಿಚಾರಮಂಥನಕ್ಕೆ, ಅನುಭವಗಳ ಹೊಳಹಿಗೆ, ಹೊಳಪಿಗೆ ವೇದಿಕೆಯಾಗಿ ರೂಪುಗೊಂಡಿದೆ. ಪತ್ರಿಕೆ ಪ್ರಯೋಗಶೀಲವಾಗಿರಬೇಕು. ಈ ನಿಟ್ಟಿನಲ್ಲಿ ಓದುಗರ ಅಭಿಪ್ರಾಯವನ್ನು ಮನ್ನಿಸಿ  ಪತ್ರಿಕಾ ವಿನ್ಯಾಸದಲ್ಲಿ ಬದಲಾವಣೆ ಮಾಡಿಕೊಂಡಿದ್ದೇವೆ. ಜೊತೆಗೆ ಈ  ಬಾರಿಯ ಸಂಚಿಕೆಯಲ್ಲಿ ಕಲಾವಿದೆ, ಬರಹಗಾರ್ತಿ,  ಗೆಳತಿ ಶ್ರೀ ಲಕ್ಷ್ಮಿ ಎಂ. ಭಟ್ ಜಾನಪದ ನೃತ್ಯ ಸೊಬಗಿನ ಆದ್ಯಂತ ವಿಚಾರಗಳನ್ನು  ಲೋಕಭ್ರಮರಿಯೆಂಬ ಅಂಕಣದ ಮೂಲಕ ಇನ್ನು ಮುಂದೆ ಹಂಚಿಕೊಳ್ಳಲಿದ್ದಾರೆ. ಚಿಂತನೆಗಳ ಚಾವಡಿಯಾಗಿ ಅಂಗಳದ ಮಾತು– ತಿಂಗಳ ಚರ್ಚೆ ನಿಮ್ಮದಾಗಲಿದೆ. ಉಳಿದಂತೆ ತಿಳಿವಳಿಕೆಯ ಮಂಥನಕ್ಕೆ ಒಂದಷ್ಟು ಲೇಖನ ಸಂವಾದಗಳಿವೆ. ಇಷ್ಟವಾದೀತೆಂದು ಅನಿಸಿಕೆ. ಓದಿ ಪ್ರೋತ್ಸಾಹಿಸಿ, ಪ್ರತಿಕ್ರಿಯಿಸುವಿರಾಗಿ ನಂಬುಗೆ.

**ನೂಪುರ ಭ್ರಮರಿ** ಸದಾಶಯದ ಆಸಕ್ತಿಯಲ್ಲಿ ಹುಟ್ಟಿಕೊಂಡದ್ದು.  ನಿಮ್ಮ ಒಂದಿನಿತು ಅಭಿಪ್ರಾಯ, ಪತ್ರಿಕೆಯನ್ನು ಕಾಲಾನುಕೂಲ ತರಿಸಬೇಕೇ, ಬೇಡವೇ ಎಂಬುದನ್ನು ಹೇಳಿದರೆ ಸಹಾಯವಾಗುತ್ತದೆ. ಪತ್ರಿಕೆಯ ಎಲ್ಲಾ ಖರ್ಚುಗಳು ವೈಯಕ್ತಿಕ ವೆಚ್ಚದ



# ಅಂಗಳದ ಮಾತು... ತಿಂಗಳ ಚರ್ಚೆ...

**ಶತಾವಧಾನಿ ಡಾ ।ಗಣೇಶ್** ಹೀಗೆ ಹೇಳುತ್ತಾರೆ. . .

**ಇ**ಂದಿನ ರಂಗ ಪ್ರವೇಶಗಳು ನೃತ್ಯದ ಬೊಜ್ಜ ಅಂದರೆ ಶ್ರಾದ್ಧ ಮಾಡ್ತಿವೆ. ವಿದ್ಯಾರ್ಥಿಗಳೆಲ್ಲರೂ ಕಡ್ಡಾಯವಾಗಿ ನಾವು  ರಂಗಪ್ರವೇಶಕ್ಕೆ ಇಷ್ಟೆಲ್ಲಾ ದುಬಾರಿ ಖರ್ಚು ಮಾಡಿ ಮಾಡೋದಿಲ್ಲ ಅಂದ್ರೆ ಯಾತಕ್ಕಾಗೋದಿಲ್ಲ?  ವಿದ್ಯಾರ್ಥಿಗಳಿಗೇ ತಮ್ಮ ರಂಗ ಪ್ರವೇಶ ಮಿನಿಮದುವೆ ಆದ ಹಾಗಿರಬೇಕು ಅಂತಿರುತ್ತೆ ಅಂತಾದ ಮೇಲೆ, ರಂಗ ಪ್ರವೇಶದ ಬೂಟಾಟಿಕೆಗಳನ್ನು ತಡೆಯೋದು ಹೇಗೆ?

**ನಾಟ್ಯಾಚಾರ್ಯ ಕೆ. ಮುರಳೀಧರ ರಾವ್** ಅವರ ಅನಿಸಿಕೆ ಹೀಗಿದೆ...

ಮೊದಲು ರಂಗಪ್ರವೇಶದಲ್ಲಿ ನರ್ತಕಿಯ ನೃತ್ಯ ಅಭಿನಯ ಭಾಗದ ಜಾಣ್ಮೆ ಮುಖ್ಯವಾಗಿತ್ತು.  ಈಗೀಗಂತೂ ರಂಗ ಪ್ರವೇಶಕ್ಕೂ ಮದುವೆಗೂ  ವ್ಯತ್ಯಾಸವೇ ಇಲ್ಲ.  ಒಂದೊಂದ್ಸಲ ರಂಗ ಪ್ರದರ್ಶನ ಕಂಡು ಸಂತೋಷಿಸಿದ ಹುಡುಗ ಅವಳನ್ನೇ ಮದುವೆಯಾಗಿ ಮನೆ ತುಂಬಿಸಿಕೊಳ್ಳುವಲ್ಲಿಗೆ ರಂಗಪ್ರವೇಶದ ಮೂಲಕ ಕಲಿತ ವಿದ್ಯೆ ಮರೆಯಾದ ಸಂದರ್ಭಗಳೂ ಇದೆ.  ಒಟ್ಟಿನಲ್ಲಿ ಇದು ಸಮಾಜದಲ್ಲಿ ಸುಸಭ್ಯ ನೆಲೆ ಪಡೆಯಲು ಪಡೆದಿರಬೇಕಾದ ಸಂಸ್ಕಾರ, ನೆಂಟಸ್ತನ ಕುದುರಲು ಒಂದು ವೇದಿಕೆ!

ಮೈಸೂರಿನ ಎಸ್‌ಎಲ್‌ವಿ ಫೌಂಡೇಶನ್‌ನ ಕಾರ್ಯದರ್ಶಿ, ಕಲಾ ವಿಮರ್ಶಕ **ಬಿಎಸ್‌ಎಸ್ ರಾವ್** ಅವರ ಅಭಿಪ್ರಾಯ ಹೀಗಿದೆ...

**ಭ**ರತನ ನಾಟ್ಯಶಾಸ್ತ್ರದಲ್ಲಿ ಅರಂಗೇಟ್ರಂ ಅಥವಾ ರಂಗಪ್ರವೇಶದ ಕುರಿತಾಗಿ ಪ್ರಸ್ತಾವನೆಯೇ ಇಲ್ಲ. ಅರಂಗೇಟ್ರಂ ಪ್ರಚಲಿತಕ್ಕೆ ಬಂದದ್ದೇ ದೇವದಾಸಿಯರ ಕಾಲದಲ್ಲಿ! ಕಲಾಕ್ಷೇತ್ರದ ಗುರು, ಭಾರತದ ಮೇರು ನೃತ್ಯ ಕಲಾವಿದೆಯಾದ ರುಕ್ಮಿಣೀದೇವಿ ಅರುಂಡೇಲರೂ ತಮ್ಮ ವಿದ್ಯಾರ್ಥಿಗಳಿಗಾಗಿ ಅರಂಗೇಟ್ರಂನನ್ನು ಪ್ರೋತ್ಸಾಹಿಸಲಿಲ್ಲ. ಇಂದಿಗೂ  ಅವರ ಆಪ್ತ ಶಿಷ್ಯವರ್ಗ ತಮ್ಮ ಶಿಷ್ಯರಿಗೆ ಅಂತಹ ಪ್ರದರ್ಶನಗಳನ್ನು ಆಯೋಜಿಸುವುದಿಲ್ಲ. ಅರಂಗೇಟ್ರಂ ಇಂದು ಬೇಗನೆ ಹಣ ಮಾಡಲು ಹೊರಟ ಗುರುಗಳಿಗೆ ಇರುವ  ವ್ಯಾಪಾರದ ಸರಕು. ಈ ಪಿಡುಗು ಕಲ್ಪನಾತೀತವಾಗಿ ವ್ಯಾಪಕವಾಗಿ ಹರಡುತ್ತಿದ್ದು, ಯುಎಸ್‌ಎಯಂತಹ ವಿದೇಶಗಳಲ್ಲಿ ೧ ಲಕ್ಷ ಯುಎಸ್‌ಡಿ ಅಂದರೆ ಅಂದಾಜು ೪೦,೦೦೦೦ ರುಪಾಯಿಗಳನ್ನು ಖರ್ಚು ಮಾಡುತ್ತಾರೆ. ಇದು ಹುಚ್ಚುತನ ಅಷ್ಟೇ ಅಲ್ಲ, ದೈವಿಕ ಕಲೆಯೊಂದಕ್ಕೆ ಬಗೆಯುವ ದ್ರೋಹ!..

• • • • • • • • • • • • •

ಬಗ್ಗೆ ಹೊಸದಾಗಿ ತಿಳಿದುಕೊಳ್ಳುವವರಿಗೆ ಸಾಕಷ್ಟು ಮಾಹಿತಿಯನ್ನು ಒದಗಿಸಿದಂತಾಗಿದೆ. ಜೊತೆಗೆ ದರ್ಶನ ಭ್ರಮರಿಯಲ್ಲಿ ತಿಂಗಳ ಅತಿಥಿಯಾಗಿ ಕಲಾವಿದೆ, ವಿದುಷಿ ರೂಪಾ ಶ್ರೀಕೃಷ್ಣ ಉಪಾಧ್ಯ ಇವರ ಸಂದರ್ಶನ ಉತ್ತಮವಾಗಿ ಮೂಡಿಬಂದಿದೆ.

ನಾಟ್ಯಕಲಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪತ್ರಿಕೆಯೊಂದು ಇರಬೇಕಿತ್ತು ಎಂದು ಭಾವಿಸುತ್ತಿದ್ದ ನನಗೆ, ನಿಮ್ಮ ಈ ಪ್ರಯತ್ನ ಖುಷಿ ನೀಡಿದೆ. ಈ ಪತ್ರಿಕೆ ಭರತನಾಟ್ಯವನ್ನು ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳಿಗೆ ಸಾಕಷ್ಟು ಉಪಯುಕ್ತವಾಗಿದೆ. ಪ್ರತಿ ಸಂಚಿಕೆಯಲ್ಲೂ ಗಣ್ಯ ಕಲಾವಿದರ ಪರಿಚಯ–ಯಾ–ಸಂದರ್ಶನ ಮೂಡಿಬರಲಿ. ಸಾಧ್ಯವಾದಲ್ಲಿ ಕೆಲವು ರೇಖಾ ಚಿತ್ರಗಳೂ ಇರಲಿ. ಸಾಧ್ಯವಾದಲ್ಲಿ ಅಲ್ಲಲ್ಲಿ ಪ್ರದರ್ಶನಗೊಳ್ಳುವ ಭರತನಾಟ್ಯ ಕಾರ್ಯಕ್ರಮಗಳ ಕುರಿತಾದ ವಿಮರ್ಶನ ವರದಿಗಳಿಗಳೂ ಅವಕಾಶವಿರಲಿ. ಮುಂದಿನ ಸಂಚಿಕೆಗಳಲ್ಲಿ ನಾಟ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿವಿಧ ಆಯಾಮಗಳು ವಿಸ್ತಾರವಾಗಿ ಮೂಡಿ ಬರಲಿ ಎಂದು ಹಾರೈಸುವೆ.

**ನಿಡುವಜೆ ರಾಮ ಭಟ್, ಬರಹಗಾರರು,**
**ಗುಂಡಿಬೈಲು,ಉಡುಪಿ.**

.ಪತ್ರಿಕೆಯ ನಿರೂಪಣೆಯಲ್ಲಿ ನಿಮ್ಮ

ಶ್ರಮ ಅಭಿನಂದನೀಯ. ಶುಭವಾಗಲಿ.
**ಶತಾವಧಾನಿ ಡಾ\ ಆರ್. ಗಣೇಶ್**
**ಬೆಂಗಳೂರು**

....**ಮೊ**ದಲ ಸಂಚಿಕೆಗೆ ಧನ್ಯವಾದಗಳು, ನೂಪುರ ಭ್ರಮರಿ ಯಶಸ್ವಿಯಾಗಲೆಂದು ಹಾರೈಸುತ್ತೇನೆ
**ಬಿ.ಎಸ್.ಎಸ್. ರಾವ್**
**ಕಲಾವಿಮರ್ಶಕ, ಕಾರ್ಯದರ್ಶಿ**
**ಎಸ್.ಎಲ್.ಎ ಫೌಂಡೇಶನ್, ಮೈಸೂರು**

..**ಹೃತ್ಪೂರ್ವಕ** ಶುಭಾಷಯಗಳು. ತಮ್ಮ ನೂಪುರ ಭ್ರಮರಿ ಸ್ವಾಗತಾರ್ಹ ಪತ್ರಿಕೆ. ಬಹಳ ಒಳ್ಳೆಯ ಗುರಿ ಉಳ್ಳ ಪತ್ರಿಕೆ. ಜನಪ್ರಿಯ ಪತ್ರಿಕೆಯಾಗಲಿ..

**ಅನಂತ ಶುಭಾಷಯಗಳೊಂದಿಗೆ**
**ನಂದಿನಿ ಈಶ್ವರ್**
**ರಾಸವೃಂದ**
**ಮೈಸೂರು.**



ಪರಿಮಿತಿಯೊಳಗೇ ನಡೆಯಬೇಕಾದ್ದರಿಂದ ನೀವು ಹೇಳಿದಲ್ಲಿ ನಿಮ್ಮನ್ನು ತಲುಪಲು, ಪತ್ರಿಕೆಯನ್ನು ಕಳಿಸಿಕೊಡಲು ಅನುಕೂಲವಾಗುತ್ತದೆ.

ಮೊದಲನೇ ಸಂಚಿಕೆಯಲ್ಲಿ ಹೇಳಿದ ಆಶಯಗಳನ್ನು ಮತ್ತೊಮ್ಮೆ ನೆನಪು ಮಾಡಿಕೊಳ್ಳಲಿಚ್ಚಿಸುತ್ತೇವೆ. ಈ ಭ್ರಮರಿ ನಿಮ್ಮದು, ನಮ್ಮೆಲ್ಲರದು, ಗುರು–ಕಲಾವಿದರನ್ನು ಒಳಗೊಂಡಂತೆ ಸಾಮಾನ್ಯ ಜನರೂ ನೃತ್ಯ ಕ್ಷೇತ್ರದ ಕುರಿತಂತೆ ಸಂವಾದದಲ್ಲಿ ಪಾಲ್ಗೊಳ್ಳಬೇಕು, ನೃತ್ಯವೆಂಬುದು ಸೀಮಿತ ಕ್ಷೇತ್ರವಾಗದೇ ಮುಕ್ತ ಅವಕಾಶ ಅನುಭವಗಳನ್ನು ಕಲ್ಪಿಸಬೇಕು. ನೃತ್ಯದ ಬಗ್ಗೆ ಎಲ್ಲಾ ರೀತಿಯ ಪರ–ವಿರೋಧವನ್ನು ಒಳಗೊಂಡಂತೆ ಅಭಿಪ್ರಾಯಗಳು ಹರಿದು ಬರಬೇಕು, ಗುಣಾತ್ಮಕ ಚಿಂತನೆಗೆ ಅವಕಾಶ ಬೇಕು, ಬರಿಯ ಶಾಸ್ತ್ರೀಯ, ಪಾರಂಪರಿಕ ಜ್ಞಾನವನ್ನಷ್ಟೇ ಮುಂದಿಡುವುದಲ್ಲ, ಬದಲಾಗಿ ಪ್ರಚಲಿತ ಸ್ಥಿತಿಗಳತ್ತಲೂ ದೃಷ್ಟಿ ಹೊರಳಿಸಬೇಕೆಂದು ಆರಂಭಗೊಂಡ ಏಕ ಸಂಪಾದಕತ್ವದ, ಏಕ ಪ್ರಕಾಶನದಲ್ಲಿ ಮುನ್ನಡೆಯುತ್ತಿರುವ ಖಾಸಗಿ ಪತ್ರಿಕೆ. ಇದರ ಬೆಳವಣಿಗೆಗೆ ನಿಮ್ಮ ಕೊಡುಗೆ, ಸಹಕಾರ ಅತ್ಯಗತ್ಯ ಮತ್ತು ಅಮೂಲ್ಯ. ಹಾಗಾಗಿ ನಮ್ಮೆಲ್ಲರ ಕ್ಷಿತಿಜವನ್ನು ವಿಸ್ತರಿಸಿಕೊಳ್ಳಲು ನಿಮ್ಮ ಲೇಖನಿಯಿಂದ ವಿಚಾರಗಳು ಹರಿದುಬರಲಿ. ನಮ್ಮೆಲ್ಲರನ್ನೂ ಮಂಥಿಸಲಿ.

ಪ್ರೀತಿಯಿಂದ ನಿಮ್ಮ
**ಮನೋರಮಾ ಬಿ. ಎನ್**



ಆಡೋಣ ಬನ್ನಿ ಕಣ್ಣ ಮುಚ್ಚಾಲೆ
ತೂಗೋಣ ಬನ್ನಿ ಉಯ್ಯಾಲೆ
ಜೀವನ ಒಂದು ನಾಟಕ ಶಾಲೆ
ನಾವೆಲ್ಲ ಕುಣಿಯುವ ನರ್ತನಶಾಲೆ
ಉಯ್ಯಾಲೆ. . . ಚಂಪಾಲೆ. . .



## ರಂಗಭ್ರಮರಿ ಬದಲಾಗಬೇಕಿದೆ ಮನಸ್ಸು..!

‘ಮನೂ’ ಬನ

**ವ್ಯಾ**ಪಾರೀಕರಣದಲ್ಲಿ ನಲುಗುತ್ತಿರುವ ನೃತ್ಯ ತರಬೇತಿ, ದುಬಾರಿ ಖರ್ಚು-ವೆಚ್ಚ, ನಾಯಿಕೊಡೆಗಳಂತೆ ತಲೆ ಇತ್ತುತ್ತಿರುವ ನೃತ್ಯ ಸಂಸ್ಥೆಗಳು, ಎಲ್ಲೆಂದರಲ್ಲಿ ಭರತನಾಟ್ಯ ಎಂದು ಹಣೆಪಟ್ಟಿ ಕಟ್ಟಿಕೊಂಡು ಪ್ರದರ್ಶಿಸುವ ನೃತ್ಯಗಳು... ಹೀಗೆ ಒಂದಲ್ಲ, ಎರಡಲ್ಲ... ಹಲವಾರು ಅಧ್ವಾನಗಳ ಹಿಂದೆ ಯಾರ ಕೈವಾಡವಿದೆ? ಸಂಸ್ಥೆಗಳದ್ದೇ? ಗುರುಗಳದ್ದೇ? ಅಥವಾ ಇಂದಿನ ಶಿಕ್ಷಣ ಪದ್ಧತಿಯದ್ದೇ?..ಉಹುಂ...ಇವ್ಯಾವೂ ಅಲ್ಲ... ಇದ್ದಾರೂ ಅವರ ಪಾಲು ಸ್ವಲ್ಪದರದ್ದೇ..! ಹಾಗಾದರೆ ಮತ್ಯಾರದ್ದು? ಸ್ವಲ್ಪ ಚಿಂತಿಸಿ...

ಹೌದು..ಅವೆಲ್ಲದರ ಮೂಲ ಪಾಲು ಪೋಷಕರದ್ದು ಮತ್ತು ವಿದ್ಯಾರ್ಥಿಗಳದ್ದು. ಹೀಗೆ ಹೇಳುತ್ತಿರುವುದಕ್ಕೆ ನೀವು ಹುಬ್ಬೇರಿಸಬಹುದು.! ಆದರೆ ಇಂದು ನೃತ್ಯವನ್ನು ಅವರು ತಿಳಿಯುತ್ತಿರುವ ರೀತಿ, ಅದನ್ನು ಆವಿರ್ಭಾವಿಸಿಕೊಂಡ ನೀತಿ, ಗುರುಗಳಿಗೆ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ನೀಡುತ್ತಿರುವ ಅನಾರೋಗ್ಯಕರ ಕುಮ್ಮಕ್ಕು... ಇವೇ ಮುಂತಾದವುಗಳನ್ನು ಗಮನಿಸಿದರೂ ಸಾಕು, ಪ್ರಸ್ತುತ ಸ್ಥಿತಿಯಲ್ಲಿ ನೃತ್ಯಕ್ಷೇತ್ರ ಕಂಡುಕೊಂಡ ಎಲ್ಲಾ ಬೆಳವಣಿಗೆಗಳ (?) ಹಿಂದೆಯೂ ನಿಸ್ಸಂಶಯವಾಗಿ ವಿದ್ಯಾರ್ಥಿಗಳ ಮತ್ತು ಪೋಷಕರ ಹಸ್ತಕ್ಷೇಪವಿದೆ.

ಶಾಸ್ತ್ರೀಯ ನೃತ್ಯವನ್ನು ಶ್ರೀಮಂತಿಕೆಯ ಆಸ್ತಿ ಎಂದು ಪರಿಗಣಿಸುವವರು ಕೆಲವರಾದರೆ, ಕೆಲವರಿಗೆ ಅದು ಪ್ರದರ್ಶನದ ಸರಕು, ಪ್ರತಿಷ್ಠೆಯ ಸಂಕೇತ. ಇನ್ನೂ ಕೆಲವರಿಗೆ ದೈಹಿಕ ವ್ಯಾಯಾಮಕ್ಕೆ, ಸಮಯ ಕಳೆಯಲಿಕ್ಕೆ ಇರುವ ಮಾರ್ಗ. ಇದರೊಂದಿಗೆ ಶಾಸ್ತ್ರೀಯ ನೃತ್ಯವನ್ನು ಬೇರಾವುದೋ ಆಧುನಿಕ ಶೈಲಿಯೊಂದಿಗೆ ಮಿಶ್ರ ಮಾಡಿ ತೋರಿಸುವ ಹಟವೂ ಜೊತೆಗೂಡಿ, ಒಟ್ಟಾರೆ ನೃತ್ಯಗಳ ಮೂಲಸ್ಥಾನ ಮರೆತುಹೋಗುವ ಮಟ್ಟಿಗೆ ಕಟ್ಟುನಿಟ್ಟಾಗಿ ಕಗ್ಗೊಲೆ ಮಾಡುವ ಕಾರ್ಯಕ್ರಮ ಹಮ್ಮಿಕೊಂಡಂತಾಗಿದೆ. ಶಾಸ್ತ್ರೀಯ ನೃತ್ಯಗಳ ಕುರಿತು ಅದರಲ್ಲೂ ಭರತನಾಟ್ಯದ ಬಗ್ಗೆ ಹೇಳಲಾದ ಎಲ್ಲಾ ಪಾರಂಪರಿಕ ಮಾತುಗಳನ್ನು ಮೂಲೆಗುಂಪಾಗಿಸಿ ತಾವೇ ಹೇರಿಕೊಂಡ, ರೂಪಿಸಿಕೊಂಡ ನಿಯಮಗಳನ್ನು ಜಾರಿಗೆ ತರುವ ಮನೋಭಾವ ಹೆಚ್ಚಾಗುತ್ತಿದೆ.

ಕೆಲವರಿಗೆ ಭರತನಾಟ್ಯ ಕಲಿಯುವುದು ಎಂದರೆ ವೇದಿಕೆಯಲ್ಲಿ ಕಾರ್ಯಕ್ರಮ ಕೊಡುವುದಕ್ಕಷ್ಟೇ ಸೀಮಿತ. ಪೋಷಕರೂ ಇದನ್ನು ಬೆಂಬಲಿಸುವುದೂ ಹೊರತಲ್ಲ.ನಾಟ್ಯದ ಮೂಲ ಪಾಠಗಳನ್ನು ಸರಿಯಾಗಿ ಕಲಿಯದೇ ನೃತ್ಯಬಂಧಗಳ ಕುರಿತೇ ಯೋಚಿಸುವ ಮಂದಿ,



**ಪ**ತ್ರಿಕೆ ಪ್ರಯೋಗಶೀಲವಾಗಿದೆ, ಮಾಹಿತಿ ಪೂರ್ಣವಾಗಿದೆ. ನಿಮ್ಮ ಪ್ರಯತ್ನ ಯಶಸ್ವಿಯಾಗಲಿ ಅಭಿನಂದನೆಗಳು.

ನೀವು ಅಪೇಕ್ಷಿಸಿದಂತೆ ಒಂದೆರಡು ಸಲಹೆಗಳು:

1. ಖಾಸಗಿ ಪ್ರಸಾರಕ್ಕೆ ಇಪ್ಪತ್ತು ಪುಟ ಸ್ವಲ್ಪ ಭಾರವಾಗದೇ? ಇದನ್ನೇ ಮುಂದಕ್ಕೂ ತಾಳಿಕೊಳ್ಳುವ ಶಕ್ತಿಯಿದ್ದರೆ ಸರಿ.
2. ರಾಷ್ಟ್ರ- ಅಂತರರಾಷ್ಟ್ರ ಮಟ್ಟದ ಕಲಾವಿದರನ್ನು ಮೊದಲು ಪರಿಚಯಿಸಿ, ಅವರಿಂದ ಕಲಿಯುವುದು ಬಹಳಷ್ಟಿರುತ್ತದೆ.
3. ಕನ್ನಡ-ಆಂಗ್ಲ ದಿನಪತ್ರಿಕೆಗಳಲ್ಲಿ ಕೆಲವು ಒಳ್ಳೆಯ ನೃತ್ಯ ವಿಮರ್ಶೆ-ವಿಚಾರಗಳು ಪ್ರಕಟವಾಗುತ್ತವೆ. ಅದನ್ನು ಪುನರ್ ಮುದ್ರಿಸಬಹುದು. (ಖಾಸಗಿ ಪ್ರಸಾರವಾದ್ದರಿಂದ ಅನುಮತಿ ಬೇಕಾಗಲಾರದು).
4. ಲೇಖಕರ ಸಂಕ್ಷಿಪ್ತ ಪರಿಚಯವಿರಲಿ. ಆಗ ಲೇಖನಕ್ಕೆ ತೂಕ ಹೆಚ್ಚಾಗುತ್ತದೆ.
5. ಪ್ರತಿಕ್ರಿಯೆಗಳಿಗೆ ಜಾಗವಿರಲಿ.

**ಶುಭಾಷಯಗಳೊಂದಿಗೆ,**
**ಬಾಲಸುಬ್ರಹ್ಮಣ್ಯ ಕಂಜರ್ಪಣೆ**
**ನ್ಯಾಯವಾದಿಗಳು ಮತ್ತು ಬರಹಗಾರರು**
**ಮಡಿಕೇರಿ**

---

**ವಿ**ವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಹಲವಾರು ಪತ್ರಿಕೆಗಳಿದ್ದರೂ ಕಲಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇರುವ ಪತ್ರಿಕೆಗಳು ವಿರಳ. ಅಂತಹುದರಲ್ಲಿ ಭರತನಾಟ್ಯ ಕಲೆಗೇ ಮೀಸಲಾಗಿ ನೂಪುರ ಭ್ರಮರಿ ಪತ್ರಿಕೆಯು ಆರಂಭಗೊಂಡಿರುವುದು ಕಲಾ ಪ್ರೇಮಿಗಳಿಗೆ ಸಂತಸ ತರುವ ವಿಚಾರವಾಗಿದೆ.

ಪುಟ್ಟದಾಗಿ ರೂಪುಗೊಂಡಿರುವ ದ್ವೈಮಾಸಿಕ ಪತ್ರಿಕೆಯ ಮೊದಲ ಸಂಚಿಕೆಯಲ್ಲಿಯೇ ನಾಟ್ಯ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಹಲವಾರು ಮಾಹಿತಿಗಳನ್ನು ನೀಡಿರುವುದು ಸ್ವಾಗತಾರ್ಹ. ನಾಟ್ಯದಲ್ಲಿ ಅಲರಿಪುವಿನ ಪರಿಚಯ, ರಂಗಪ್ರವೇಶ(ಅರಂಗೇಟ್ರಂ)ದ ಅಗತ್ಯತೆ ಅಥವಾ ಮಹತ್ವ, ನರ್ತನ ಪ್ರಕಾರಗಳಲ್ಲಿ ಹಸ್ತಗಳು ಮೊದಲಾದ ವಿಚಾರಗಳು ನಾಟ್ಯದ

# ನಿಮ್ಮ ಬರೆಹ ನಮ್ಮ ಓದು...

**ನೀ**ವು "ನೂಪುರ ಭ್ರಮರಿ" ಎಂಬ ಸಾಂಸ್ಕೃತಿಕ ದ್ವೈಮಾಸಿಕವೊಂದನ್ನು ತಂದಿರುವುದು ತುಂಬಾ ಸಂತೋಷ ತಂದಿದೆ. ಸಾಂಸ್ಕೃತಿಕ ವಿಭಾಗದ ಪತ್ರಿಕೆಯೊಂದನ್ನು ನಡೆಸಲು ಹೊರಟಿರುವ ನಿಮ್ಮ ಸಾಹಸವು ಅಭಿನಂದನೀಯವಾದುದು. ನಿಮಗೆ ಭಗವಂತನು ಎಲ್ಲ ರೀತಿಯ ಯಶಸ್ಸು ಕರುಣಿಸಲೆಂದು ಹಾರೈಸುತ್ತೇನೆ.

ಪತ್ರಿಕಾರಂಗವೇ ವೈಶಿಷ್ಟ್ಯಪೂರ್ಣ ಅನುಭವ ನೀಡುವಂತಹ ಸವಾಲಿನ ವಿಷಯ. ಅದು ನಮ್ಮ ಅಂತರಂಗದ ಶಕ್ತಿಯನ್ನು ಮತ್ತು ಸಂವೇದನಾಶೀಲತೆಯನ್ನು ಪ್ರಶ್ನಿಸುವಂತಿರುತ್ತದೆ. ಸಾಮಾನ್ಯ ಪತ್ರಿಕೆಯೊಂದನ್ನು ನಡೆಸುವುದೇ ಹರಸಾಹಸದ ವಿಷಯ. ಅಂತಹುದಲ್ಲಿ ನಿಮ್ಮ ಪ್ರಯತ್ನವನ್ನು ಮೆಚ್ಚಲೇಬೇಕು. ಆದರೆ ಒಂದು ಮಾತು; ಮನುಷ್ಯನ ಪ್ರಯತ್ನಕ್ಕೆ ಸಾಧನೆಗೆ ಅದು ನಿಸ್ವಾರ್ಥವಾಗಿದ್ದಲ್ಲಿ ಫಲ ಸಿಗುತ್ತದೆಂಬ ನಂಬಿಕೆ ನಮ್ಮದು. ಲೇಖನಗಳು ಉತ್ತಮವಾಗಿ ಮೂಡಿ ಬಂದಿವೆ.ನಿಮ್ಮ ಪ್ರಯತ್ನವು ಯಶಸ್ವಿಯಾಗಲೆಂದು ಹಾರೈಸುತ್ತೇನೆ.

**ಪ್ರೊ.ಎಸ್.ಪ್ರಭಾಕರ್**
**ಸಂಪಾದಕರು**
**ಮಂಜುವಾಣಿ ಮಾಸಪತ್ರಿಕೆ**
**ಧರ್ಮಸ್ಥಳ.**

---

...**ವಿ**ಶೇಷ ಕಲಾ ಪ್ರಕಾರದ ಬಗ್ಗೆ ಈ ತರಹದ ಒಂದು ಸಂಚಿಕೆ ಹೊರ ಬರುತ್ತಿರುವುದೇ ಒಂದು ಸಂತಸದ ಸಂಗತಿ. ನೃತ್ಯದ ಮೇಲೆ ಪ್ರೀತಿಯಿರುವವರಿಗೆಲ್ಲಾ ಇದು ಉಪಯುಕ್ತವಾಗಬಲ್ಲದು. ನೃತ್ಯ ತಿಳಿಯದವನಿಗೂ ಹೊಸ ಲೋಕದ ಪರಿಚಯವಾಗುತ್ತದೆ, ನಿಮ್ಮ ಈ ಪ್ರಯತ್ನ ಯಶಸ್ವಿಯಾಗಲಿ. ('ಬರಹ' 7.0 ಬಳಸಿ. ಈಗಿನ ಸಂಚಿಕೆಯಲ್ಲಿ ಹಳೆಯ ಸಾಫ್ಟ್‌ವೇರ್ ಬಳಸಿರುವುದರಿಂದ 'ಯ' ಕಾರ ತಪ್ಪಾಗಿ ಬಂದಿದೆ.) ವಂದನೆಗಳು.

**ವಸುಧೇಂದ್ರ . ಎಸ್, ಕಥೆಗಾರರು,**
**ಬೆಂಗಳೂರು.**

---



ಪ್ರಾರಂಭಿಕ ಹಂತದ ಮಟ್ಟುಗಳನ್ನು ಕಲಿಯುವಲ್ಲಿಗೇ ಶಾಸ್ತ್ರೀಯ ನೃತ್ಯಗಳ ಬಗೆಗೆ ನಿರಾಸಕ್ತಿ ಬೆಳೆಸಿಕೊಂಡು, ಬೋರ್ ಎನ್ನುತ್ತಾ ಫಿಲ್ಮೀ, ಪಾಪ್ ಸಂಗೀತ ನೃತ್ಯಗಳಿಗೆ ವಾಲುತ್ತಾರೆ. ಅವರ ಪಾಲಿಗೆ ನಾಟ್ಯವೆಂದರೆ ವರುಷದೊಳಗಾಗಿ ವೇದನೆಯಿಲ್ಲದೆ ಸಾಧಿಸುವ ಜನಪ್ರಿಯ ಕಲೆ. ಚೆನ್ನಾಗಿ ವೇಷಭೂಷಣ ತೊಟ್ಟು ರಂಗ ಪ್ರವೇಶ ಮಾಡಿ, ಹೇರಳ ಹಣ ಖರ್ಚು ಮಾಡಿದರಂತೂ ಅಲ್ಲಿಗೆ ಕಲಾವಿದೆ ಎಂದೆನಿಸಿಕೊಳ್ಳುವ ಹಠದ ಮುಂದೆ ಶಾಸ್ತ್ರೀಯ ನೃತ್ಯಗಳ ಮೂಲ ಅನುಭಾವಿಕ ಅನುಭವಗಳು ತೆರೆದುಕೊಳ್ಳುವುದೇ ಇಲ್ಲ.

ಭರತನಾಟ್ಯ ಕಲೀಲಿಕ್ಕೆ ಬಂದು ಕಲಿಯುವಾಗ ತೀರಾ ಅವಸರ ಮಾಡುತ್ತಾರೆ. ಅಡವುಗಳ ಪಾಠ ಒಂದೆರಡು ವರ್ಷ ಆಗದೇ ಹೇಗೆ ತಾನೇ ಮುಂದಿನ ಪಾಠಕ್ಕೆ ಹೋಗೋದು? ಆದರೆ ಅಷ್ಟರೊಳಗೆ ಗುರುಗಳಿಗೆ ಕಲಿಸೋಕೆ ಬರಲ್ಲ ಅಂತಾನೋ, ಜಾನಪದ ಹೇಳಿಕೊಡೋಲ್ಲ, ಸ್ಟೇಜಿಗೆ ಹತ್ತಿಸೊಲ್ಲ ಅಂತಾನೋ, ಎಕ್ಸಾಮ್‌ಗೆ ಕೂರಿಸೋಲ್ಲ, ಕಾಂಪಿಟೇಶನ್‌ಗೆ ಕಳಿಸೋಲ್ಲ ಎಂದೋ ಅರ್ಧಕ್ಕೆ ಆಸಕ್ತಿ ಕಳೆದುಕೊಂಡು ಭರತನಾಟ್ಯ ತಿಲಾಂಜಲಿ ಬಿಡ್ತಾರೆ. ಅರ್ಧ ಅರ್ಧ ಕಲಿಯುವವರನ್ನು ಪರೀಕ್ಷೆಗೋ, ಸ್ಪರ್ಧೆಗೋ, ರಂಗಕ್ಕೋ ಬಿಡುವುದು ಹೇಗೆ? ಕೆಲವು ಪೋಷಕರಂತೂ ಅಕ್ಕ ಪಕ್ಕದ ಮನೆಯವರು ತಮ್ಮ ಮಕ್ಕಳನ್ನು ಡ್ಯಾನ್ಸ್ ಕ್ಲಾಸಿಗೆ ಕಳಿಸ್ತಾರೆ ಅಂತ ಪ್ರತಿಷ್ಟೆಯ ಪ್ರಶ್ನೆಗಾಗಿ ಇವಳೂ ಡ್ಯಾನ್ಸ್ ಕ್ಲಾಸ್‌ಗೆ ಹೋಗ್ತಾಳೆ. ಎಕ್ಸಾಮ್ ಪಾಸ್ ಮಾಡಿದ್ದಾಳೆ ಎಂದು ಹೇಳಿಕೊಂಡು ಬರಲಿಕ್ಕೆ ಕಳಿಸುವವರೂ ಇದ್ದಾರೆ.

ಒಮ್ಮೊಮ್ಮೆ ಫಿಲ್ಮ್ ಡ್ಯಾನ್ಸ್‌ಗೆ ಭರತನಾಟ್ಯ ಸ್ಟೆಫ್ ಹಾಕಿಕೊಡಿ ಕಾಂಪಿಟೇಶನ್‌ಗೆ ಬೇಕು ಅಂತ ಕೇಳುವವರೂ ಇದ್ದಾರೆ. ಯಾವುದೇ ವಿದ್ಯೆಯನ್ನು ದೀರ್ಘಕಾಲ ಕಲಿಯದೆ ಅದರ ಮೇಲೆ ಒಂದು ಮಟ್ಟಿನ ಹಿಡಿತ ಬರದೆ ಪ್ರದರ್ಶನ, ಪರೀಕ್ಷೆ ಎಲ್ಲಾ ಆಗ್ಬೇಕು ಅಂದ್ರೆ ಹೇಗೆ ಸಾಧ್ಯ? ಕೆಲವು ಪೋಷಕರು ಹೇಳುವುದಿದೆ; ಶನಿವಾರ ಭಾನುವಾರ ರಜಾದಿನ; ಮಕ್ಕಳದ್ದು ಗಲಾಟೆ, ತಂಟೆ ಜಾಸ್ತಿ. ಹಾಗಾಗಿ ಸ್ವಲ್ಪ ಫ್ರೀಯಾಗಿರೋಣ ಅಂತ ಡ್ಯಾನ್ಸ್ ಕ್ಲಾಸಿಗೆ ಹಾಕಿದೆ! ಇನ್ನು ಕೆಲವರದ್ದು ಲೆಕ್ಕಾಚಾರದ ವ್ಯಕ್ತಿತ್ವ. ನೃತ್ಯಗಳ ವಿಷಯ ಬಂದಾಗ ಸಾಮಾನ್ಯವಾಗಿ ಸ್ವಲ್ಪ ಖರ್ಚು ಆಗುತ್ತೆ ಅಂತ ಸ್ವಲ್ಪ ತಿಳಿದುಕೊಂಡಿರಬೇಕು. ಎಲ್ಲರನ್ನೂ ದುಡ್ಡು ತಿನ್ನೋಕೆ ಅಂತ ತಿಳಿದರೆ ಹ್ಯಾಗೆ? ಕೆಲವರಂತೂ ಮಾತು ಪ್ರಾರಂಭಿಸುವುದೇ ಯಾವ ವರ್ಷಕ್ಕೆ ರಂಗ ಪ್ರವೇಶ ಮಾಡಿಸ್ತೀರಿ ಎಂಬಲ್ಲಿಂದ! ಒಟ್ಟಿನಲ್ಲಿ ಕೆಲವು ವಿದ್ಯಾರ್ಥಿಗಳ ಪೋಷಕರ ವ್ಯಕ್ತಿತ್ವ ರೇಜಿಗೆ ಹುಟ್ಟಿಸುತ್ತಿದೆ. ಹೀಗಿದ್ದಾಗ ಗುರುಗಳೂ ಬದಲಾಗುವುದರಲ್ಲಿ ಹೆಚ್ಚೆನಿಸುವುದಿಲ್ಲ! ವಿದ್ಯೆ ವ್ಯಾಪಾರವಾಗುವುದರಲ್ಲಿ ಸಂದೇಹವಿಲ್ಲ ಎಂದು ಬೇಸರದಿಂದ ಹೇಳುತ್ತಾರೆ ಹೆಸರು ಹೇಳಲಿಚ್ಛಿಸದ ಓರ್ವ ಹಿರಿಯ ನೃತ್ಯ ಗುರು.

ಶಾಸ್ತ್ರೀಯ ನೃತ್ಯಗಳ ಬಗೆಗಿನ  ಅಸಡ್ಡೆಯ ನಡುವೆ, ಅರ್ಥಗೊತ್ತಿಲ್ಲದೆ ಅದರ ಪರಿಣಾಮ ದುರಂತಗಳನ್ನು ಅರಿಯದೆ,  ಚೆನ್ನಾಗಿದೆ (?) ಅನ್ನುವ ಕಾರಣಕ್ಕೆ ಕುಣಿಯುವುದರಿಂದ ಸಾಂಸ್ಕೃತಿಕ ಮನರಂಜನೆಯ ವ್ಯಾಖ್ಯೆಯೇ ಬದಲಾಗುತ್ತಿದೆ. ನವೀನ ನೃತ್ಯಗಳು ಬೇಡ ಎನ್ನುವುದು ಈ ಲೇಖನದ ಆಶಯವಲ್ಲ; ಆದರೆ ಆ ನೃತ್ಯಗಳು ಅಶ್ಲೀಲ ಸಾಹಿತ್ಯವನ್ನು ಪ್ರಭಾವಿಸುತ್ತವೆ,  ಶಾಸ್ತ್ರೀಯ ನೃತ್ಯಗಳ ಸೊಬಗು-ಸೌಂದರ್ಯವನ್ನೇ ಕಸಿದುಕೊಳ್ಳುತ್ತದೆ, ಮಕ್ಕಳ ಮತ್ತು ಸಂಸ್ಕೃತಿಯ ಮನಸ್ಸುಗಳನ್ನು ಕೆಡಿಸುತ್ತದೆ ಎನ್ನುವುದಾದರೆ ಅಂತಹ ನವೀನ ನೃತ್ಯಗಳಾಗಲೀ, ಅಥವಾ ಆ ನವೀನನೃತ್ಯಗಳಿಗೆ ಭರತನಾಟ್ಯದ ವೇಷ ಭೂಷಣಗಳನ್ನು ಹಾಕಿ ಕುಣಿಯುವಲ್ಲಿ ಏನಿದೆ ಪುರುಷಾರ್ಥ? ಒಂದು ವೇಳೆ ಅಂತಹ ಆನಂದ ಹೊಂದಿದರೂ ಆ ಆನಂದ ಕ್ಷಣಿಕವಾದುದು ಎನ್ನುವುದು ಎಲ್ಲರೂ ನೆನಪಿನಲ್ಲಿಡಬೇಕಾದ ಮಾತು.

ಪೋಷಕರ ಮೇಲೆ, ಅವರು ಬೆಳೆಸಿಕೊಂಡ ಸಂಸ್ಕೃತಿಯ ಮೇಲೆ ಮಕ್ಕಳು ಬೆಳೆಸಿಕೊಳ್ಳುವ ಆಚಾರ, ವ್ಯವಹಾರ, ಗುಣವೂ ಅಡಗಿರುತ್ತದೆ.  ಒಂದು ವೇಳೆ ಪ್ರತಿಷ್ಠೆ, ಉದಾಸೀನ, ಕಾಟಾಚಾರದ ಪ್ರವೃತ್ತಿಯೇ ಬೆಳೆದರೆ ಅದು ನೃತ್ಯದ ಭವಿಷ್ಯಕ್ಕೆ ಮಾತ್ರವಲ್ಲ, ವ್ಯಕ್ತಿತ್ವಗಳ ಭವಿಷ್ಯಕ್ಕೂ ಮಾರಕವಾಗುತ್ತದೆ.  ಸ್ಪರ್ಧೆಗೆ ಹೋಗುವುದು, ಕಾರ್ಯಕ್ರಮ ಕೊಡುವುದು, ಖರ್ಚು ಮಾಡಿ ಪ್ರತಿಷ್ಠೆ ಮೆರೆಸುವುದನ್ನೇ  ಹಿಂದಿನ ಭರತನಾಟ್ಯ ಪ್ರವರ್ತಕರು ಮಾಡಿದಿದ್ದರೆ ನೃತ್ಯವೆಂಬುದು ಇಂದಿಗೂ ಅಸ್ಪೃಶ್ಯವಾಗಿಯೇ ಉಳಿಯುತ್ತಿತ್ತು. ಇದು ಹೀಗೆಯೇ ಮುಂದುವರಿದರೆ ಹಿಂದೊಮ್ಮೆ ಅಂಟಿದ್ದ ಕಳಂಕ ಮತ್ತೆ ವ್ಯಾಪಕವಾಗಿ ಹಬ್ಬೀತು! ಎಚ್ಚರವಿರಲಿ..!





ವರ್ಷಋತುವೆಂದೂ ಅರ್ಥವಾಗುತ್ತದೆ. ಪುರೋಭಾಗದಲ್ಲಿ ಚಾಲಿಸಿದರೆ ಯುದ್ಧ, ಜಗಳವೆಂಬ  ವಿನಿಯೋಗವಾಗುವುದು..

ದೇವತಾ ಹಸ್ತಗಳ ಪ್ರಕಾರದ ವಿಷ್ಣು ಹಸ್ತದಲ್ಲಿ ತ್ರಿಪತಾಕ ಹಸ್ತಗಳನ್ನು ಎರಡೂ ಕೈಗಳಲ್ಲಿ ಎದೆಯ ಮುಂದೆ ಇರಿಸಿ ಪ್ರದರ್ಶಿಸುಲಾಗುವುದು.

ದಿಕ್ಪಾಲಕ ಹಸ್ತಗಳಲ್ಲಿ ಕಂಡುಬರುವ ಇಂದ್ರಹಸ್ತದಲ್ಲಿ ತ್ರಿಪತಾಕಗಳನ್ನು ಸ್ವಸ್ತಿಕವಾಗಿರಿಸಿ ತಲೆಯ ಮೇಲೆ ಹಿಡಿದು, ಏಕಪಾದ ಸ್ಥಾನಕದಲ್ಲಿ ನಿಲ್ಲುವುದು. ಅಗ್ನಿಯನ್ನು ಸೂಚಿಸುವ ಅಗ್ನಿಹಸ್ತದಲ್ಲಿ ಬಲಗೈಯಲ್ಲಿ ತ್ರಿಪತಾಕ ಹಸ್ತ ಹಿಡಿದು, ಎಡಗೈಯ ಕಾಂಗೂಲ ಹಸ್ತವನ್ನೂ ಜೊತೆಗೆ ಎದೆ ಮುಂದಿರಿಸಿ ಪೂರ್ತಿ ಮಂಡಿಯಲ್ಲಿ ಕುಳಿತುಕೊಳ್ಳುವುದು. ಈಶಾನ ಹಸ್ತವು ತ್ರಿಪತಾಕವನ್ನು ಬಲಗೈಯಲ್ಲಿ ಎಡಗೈಯಲ್ಲಿ ಸಿಂಹಮುಖ ಹಸ್ತವನ್ನು ನಾಟ್ಯಾರಂಭದ ಕ್ರಮದಂತೆ ನಿಂತು ಹಿಡಿಯುವುದನ್ನು ಸೂಚಿಸುತ್ತದೆ.

ದಶಾವತಾರ ಹಸ್ತ ಪ್ರಕಾರದ ನರಸಿಂಹಾವತಾರ ಹಸ್ತದಲ್ಲಿ ಎಡಗೈಯಲ್ಲಿ ಸಿಂಹಮುಖವನ್ನೂ, ಬಲಗೈಯಲ್ಲಿ ತ್ರಿಪತಾಕ ಹಸ್ತವನ್ನು ನಾಟ್ಯಾರಂಭದಲ್ಲಿ ಹಿಡಿದರೆ, ಕಲ್ಕ್ಯಾವತಾರ ಹಸ್ತದಲ್ಲಿ ಬಲಗೈಯಲ್ಲಿ ಪತಾಕಹಸ್ತವನ್ನೂ ತಲೆಯಮೇಲೂ, ಎಡಗೈಯಲ್ಲಿ ತ್ರಿಪತಾಕವನ್ನು ಎದೆಯ ಮುಂದೆ ಹಿಡಿಯಲಾಗುತ್ತದೆ.

ನಾಟ್ಯಶಾಸ್ತ್ರ ಪ್ರಸ್ತಾಪಿಸುವ ನೃತ್ತಹಸ್ತಗಳ ಪೈಕಿಯ ಉತ್ಥಾನವಚಿಚಿತ ಹಸ್ತದಲ್ಲಿ ತ್ರಿಪತಾಕ ಹಸ್ತಗಳನ್ನು ೨ ಭುಜಗಳ ಬಳಿ ಬೇರೆ-ಬೇರೆಯಾಗಿ ಹಿಡಿಯಲಾಗುವುದು. ಇದು ವಿಷ್ಣು, ಸ್ತಬ್ಧವಾಗಿರುವುದು, ಸಾಕ್ಷಾತ್ಕಾರವನ್ನು  ಸೂಚಿಸುತ್ತದೆ.

ಉಪ ಹಸ್ತ ವಿಭಾಗದಲ್ಲಿ ಬರುವ ತಿಲಕ ಹಸ್ತವು ತ್ರಿಪತಾಕಹಸ್ತಗಳಲ್ಲಿ ಎಡಗೈಯನ್ನು ಅಭಿಮುಖವಾಗಿ ಹೃದಯದ ಬಳಿಯೂ, ಬಲ ಹಸ್ತವನ್ನು ಹಣೆಯ ಬಳಿಯೂ ಎನ್ನುತ್ತದೆ. ತಿಲಕ ಹಸ್ತ ಎಂದರೆ ಹಣೆಗೆ ಹಚ್ಚಿಕೊಳ್ಳುವುದು. ದೇವತೆಗಳಿಗೆ ಅರ್ಪಿಸುವ ಪುಷ್ಪಾಂಜಲಿ ಗಂಧಲೇಪನ, ತಿಲಕವನ್ನಿಟ್ಟು ಕೊಳ್ಳುವುದರಲ್ಲಿ ಇದರ ವಿನಿಯೋಗವಿದೆ. ನಿತ್ಯಜೀವನದಲ್ಲಿ ಬೊಟ್ಟನ್ನು ಕನ್ನಡಿಯನ್ನು ಕೈಯ್ಯಲ್ಲಿ ಹಿಡಿದು ಹಣೆಗೆ ಇಟ್ಟುಕೊಳ್ಳುವುದಕ್ಕೆ ಸಂವಹಿಸುತ್ತಾರೆ.

ಹತ್ತಿರ ಕರೆಯಲು, ದೂರಸರಿ, ಹೋಗಿ ಎಂದು ಸೂಚಿಸಲು, ಮಾಡಬೇಡ ಎನ್ನಲು, ಇದೋ ಪ್ರವೇಶಿಸುತ್ತೇನೆ ಎಂಬುದನ್ನು ಸೂಚಿಸಲು, ಗದ್ದವನ್ನು ಎತ್ತಿ ಹಿಡಿಯಲು, ಪಕ್ಕದಲ್ಲಿದ್ದವನಿಗೆ ತಲೆ ಬಾಗಿಸುವಾಗ, ಎರಡು ವಸ್ತುಗಳ ಸಂಬಂಧ ಸೂಚಿಸಲು, ಮಂಗಲದ್ರವ್ಯಗಳನ್ನು ಸ್ಪರ್ಶಿಸಲು, ಉಷ್ಣೀಷ–ಮಕುಟಧಾರಣಗಳನ್ನು ಸೂಚಿಸಲು, ಅಸಹ್ಯ, ಗಂಧ, ಮಾತು, ರೋಗ–ರುಜಿನಗಳನ್ನು ಮೂಗು–ಕಿವಿ–ಬಾಯಿಗಳನ್ನು ಮುಚ್ಚಿ ಸೂಚಿಸಲು ಇದರ ವಿನಿಯೋಗವಿದೆ. ಇದೇ ಹಸ್ತದಲ್ಲಿ ಎರಡು ಬೆರಳುಗಳನ್ನು ಕೆಳಗೆ–ಮೇಲೆ– ಚಲಿಸುವಂತೆ ಮುಂತಾಗಿ ಮಾಡಿದರೆ ಪಕ್ಷಿಗಳ ಹಾರಾಟ, ಪ್ರವಾಹ ಹರಿಯುವುದು, ಹಾವು–ಭ್ರಮರಗಳನ್ನು ಸೂಚಿಸಲು ಬಳಸಲಾಗುವುದು.

ಮೊಸರು ಮೊದಲಾದ ಮಂಗಲದ್ರವ್ಯಗಳನ್ನು ಮುಟ್ಟುವುದು, ಅನಾದರದಿಂದ ನಿರಾಕರಣೆ, ನಮಸ್ಕಾರ, ಮುಖವನ್ನು ಮೇಲಕ್ಕೆತ್ತುವುದು, ಸಂಶಯ, ರುಮಾಲು ಧರಿಸುವುದು, ಕಿರೀಟಧಾರಣೆ, ದುರ್ಗಂಧ, ದುರ್ಭಾಷೆ, ಕರ್ಕಶಧ್ವನಿ, ಚಿಕ್ಕ ಹಕ್ಕಿ ಹಾರುವುದು, ಪ್ರವಾಹ, ಮಂದ ಮಾರುತ, ಕಣ್ಣೀರು ಸುರಿಸುವುದು ಮತ್ತು ಒರೆಸುವುದು, ತಿಲಕಧಾರಣೆಗಳಲ್ಲಿ, ವೀರರಸ, ಸಂತಾಪ, ದೇವತೆಗಳು, ವಾಸನೆ ನೋಡುವುದು, ಆಶ್ಚರ್ಯಕರ ಮಾತುಗಳು, ನಾನಾವಿಧ ಅಂಜನ ಧರಿಸುವುದು, ಜ್ಞಾನ, ಹಡಗು, ಕಿವಿ, ವೇಶ್ಯಾಸ್ತ್ರೀ, ಪರಸ್ತ್ರೀ, ಕಿವಿಯ ಆಭರಣ, ದೊಡ್ಡಮರ, ಪರ್ವತ, ಯಜ್ಞೋಪವೀತ ಧಾರಣೆ, ಬಾಣ ತಗಲುವುದು, ರಸಾಲಮರ ಎನ್ನಲು ಬಳಸಲ್ಪಡುತ್ತದೆ.

ವಸಂತ ಋತು: ಎತ್ತರದಲ್ಲಿ ತ್ರಿಪತಾಕವನ್ನು ಹಿಡಿದು ಕಂಪಿಸುವುದು

ಕೃತ್ತಿಕಾ ನಕ್ಷತ್ರ: ತ್ರಿಪತಾಕವನ್ನು ಅಲ್ಲಾಡಿಸುವುದು.

ದಧಿ (ಮೊಸರಿನ ಸಾಗರ): ತ್ರಿಪತಾಕ ಹಸ್ತಗಳನ್ನು ಮೇಲಕ್ಕೆ ಮತ್ತು ಕೆಳಕ್ಕೆ ಎತ್ತಿ ಕೆಳಗಿಳಿಸುವುದು.

ಅರ್ಜುನ: ಎರಡೂ ಕೈಗಳಲ್ಲಿ ತ್ರಿಪತಾಕಹಸ್ತವನ್ನು ಅಲುಗಾಡಿಸುವುದು.

ಸಂಕರ ಹಸ್ತಗಳ ವಿಭಾಗದಲ್ಲಿ ತ್ರಿಪತಾಕವನ್ನು ಊರ್ಧ್ವಭಾಗದಲ್ಲಿ ಆಡಿಸಿದರೆ ವಸಂತಋತುವೆಂಬ ಅರ್ಥವೂ, ಮೇಲೆ ಮತ್ತು ಎರಡು ಪಾರ್ಶ್ವಗಳಲ್ಲಿ ಆಡಿಸಿದರೆ



ಲೋಕ ಭ್ರಮರಿ

# ಜಾನಪದ ಮನಸ್ಸು

ಶ್ರೀಲಕ್ಷ್ಮೀ ಎಂ.

**ಕ**ಲೆ ಮನುಷ್ಯನ ಜೀವಂತಿಕೆಯ ಉತ್ಕೃಷ್ಟ ಸಂಕೇತ. ಜಾನಪದ ಜನಪದದ, ಸಮುದಾಯಗಳ ಜೀವಂತಿಕೆಯಶ್ರೇಷ್ಠ ಪ್ರತಿಫಲನ. ಶಾಸ್ತ್ರೀಯ ಪರಂಪರೆಗಳಿಗಿಂತ ಭಿನ್ನವಾಗಿ ಜನಪದ ರಂಗ ಸಮುದಾಯಕ್ಕೆ ಒಂದು ವಿಧದ ಸಮಷ್ಟಿ ಪ್ರಜ್ಞೆ (ಯುನಿವರ್ಸಾಲಿಟಿ) ವ್ಯಾಪಕತೆ ಇದೆ. ಜನಪದ ಕಲೆಗಳಿಗೆ ವರ್ಗ ಧರ್ಮಗಳ ತಾರತಮ್ಯವಿಲ್ಲ.

ಜಾನಪದ ಹಾಗೂ ಶಾಸ್ತ್ರೀಯ ಕಲಾಪ್ರಕಾರಗಳ ನಡುವಣ ಸಂಬಂಧ ಸಂಕೀರ್ಣವಾದದು. ಅವು ಒಂದು ಇನ್ನೊಂದರ antithesis ಅಲ್ಲ. ಬದಲಿಗೆ ಇದು ಕೊಡುಕೊಳ್ಳುವಿಕೆಯ ಸಂಬಂಧ. ಜಾನಪದ ಕಲೆಗಳ ಶಾಸ್ತ್ರೀಯ ಪ್ರಕಾರಗಳ ಉಗಮಕ್ಕೆ ಮೂಲ. ಅಂತೆಯೇ ಇಂದಿನ ಜಾನಪದ ಕಲೆಗಳಿಗೆ ಶಾಸ್ತ್ರೀಯದ ಪ್ರೇರಣೆಯೂ ಮಹತ್ವದ್ದು. ಗ್ರೀಕ್ ಟ್ರಾಜಿಡಿ ಹಾಗೂ ಕಾಮಿಡಿಗಳ ಮೂಲವೇ ಅಲ್ಲಿನ ಫಲವತ್ತತೆ ಕುರಿತಾದ ಆಚರಣೆಗಳು (fertility rituals) ಹಾಗೂ ಗ್ರಾಮ್ಯ ದೈವಗಳು. ಭಾರತೀಯ ಶಾಸ್ತ್ರೀಯ ರಂಗಭೂಮಿ ಬೆಳೆದದ್ದು ಕೂಡ ಇಲ್ಲಿನ ಜಾನಪದ ಉತ್ಸವ ಆಚರಣೆಗಳ ಅಂಶಗಳಿಂದಲೇ. ಆದರೆ ಗ್ರಾಮೀಣ ಭಾಗದಲ್ಲಿ ಇವತ್ತು ಪ್ರಚಲಿತವಿರುವ ರಂಗ ಕಲೆಗಳು ಕೇವಲ ನಾಲ್ಕಾರು ಶತಮಾನಗಳಷ್ಟು ಹಿಂದಿನವು. ಜಾನಪದ ಎಂದಿಗೂ ನಿಂತ ನೀರಲ್ಲ. ಈ ಬದಲಾವಣೆ ಜಾನಪದ ಚಲನಶೀಲತೆಗೆ ಸಾಕ್ಷಿ.

ಹತ್ತನೆಯ ಶತಮಾನದ ಬಳಿಕ ಸಂಸ್ಕೃತದ ಪ್ರಾಬಲ್ಯ ಕಡಿಮೆಯಾಗಿ ದೇಸೀ ಭಾಷೆಗಳು ಬಲಗೊಂಡಾಗ ಸಂಸ್ಕೃತ ರಂಗ ಭೂಮಿ ಕೆಲಕಾಲ ಜಡಗೊಂಡಿತ್ತು. ಆಗ ಜಾನಪದ, ಪುರಾಣ ಕಥೆಗಳು, ದಂತ ಕಥೆಗಳು ಪ್ರದರ್ಶನಗಳು ಆ ಕೊರತೆಯನ್ನು ತುಂಬಿದವು. ಅಲ್ಲದೇ ಪುರಾಣ ಹಾಗೂ ಸಂಸ್ಕೃತ ನಾಟಕಗಳ ಕಥೆಗಳು ಜಾನಪದದ ಮೂಲಕವೇ ಜನಪ್ರಿಯತೆ ಗಳಿಸಿದವು. ಇಂದಿಗೂ ಸಂಸ್ಕೃತದ "ಸೂತ್ರಧಾರ" ಜಾನಪದದಲ್ಲಿ ರಂಗಣ್ಣ, ಭಾಗವತನಾಗಿ ಬಂದರೆ, ಅಲ್ಲಿನ "ವಿದೂಷಕ" ಹನುಮನಾಯಕ, ಕೋಡಂಗಿ, ಕೋಮಾಲಿ, ಜೂತಾನ್–ಮಿಯಾನ್ ಆಗಿ ಪ್ರತಿನಿಧಿಸಲ್ಪಡುತ್ತಾನೆ. ಇದು ಜಾನಪದ–ಶಾಸ್ತ್ರೀಯ ಕೊಡುಕೊಳ್ಳುವಿಕೆಗೆ ಸಾಕ್ಷಿ.

ಜಾನಪದವು ಸಮಾಜದ ಜನರ ದೈನಂದಿನ ಚಟುವಟಿಕೆಗಳಿಗೆ ಹೆಚ್ಚು ಹತ್ತಿರವಾದದ್ದು. ಆದ್ದರಿಂದಲೇ ಎಲ್ಲ ವರ್ಗದ ಜನಗಳಿಗೂ ಸಮಾನವಾಗಿ ಆತ್ಮೀಯವೆನ್ನಿಸುತ್ತದೆ. ಅವು ಮನುಷ್ಯನ (ಅವನ ಎಲ್ಲ ವೈರುಧ್ಯ ಹಾಗೂ ವೈವಿಧ್ಯಮಯ ಕ್ರಿಯೆಗಳನ್ನೊಳಗೊಂಡಂತೆ), ಸಹಜ ಅಸ್ತಿತ್ವವನ್ನು ಚಿತ್ರಿಸುತ್ತವೆ.

ಮಹಾರಾಷ್ಟ್ರದ ಕಲಾ ಪ್ರದರ್ಶನಗಳನ್ನು ಗಮನಿಸಿದರೆ ಅಂದಿನ ಪೇಶ್ವಾ-ಮರಾಠರ ಹೀರೋಯಿಸಮ್, ಸಂಗೀತ ಮೋಹಪೂರ್ವಕ ಆಶಾವಾದ, ಛಲ, ಪೌರುಷತ್ವ, ಸ್ತ್ರೀ ಚಿತ್ರಗಳ ಬಗ್ಗೆ ತಿಳಿಯುತ್ತದೆ. ಉತ್ತರದ ಬೃಹತ್ ಕಣಿವೆ ಸಂಸ್ಕೃತಿ, ತತ್ವಶಾಸ್ತ್ರ, ಪರಂಪರಾಗತ ನೈತಿಕತೆ, ''ರಾಮಲೀಲಾ'' ''ಕೃಷ್ಣಲೀಲಾ''ಗಳಲ್ಲಿ ಪ್ರತಿಬಿಂಬಿತವಾಗುತ್ತದೆ. ಬಂಗಾಲದ ಜಾತ್ರಾ ತೀವ್ರ ದೇಶಭಕ್ತಿ, ರಂಗಪರಂಪರೆಯ ಸಭ್ಯತೆ, ಕೌಶಲ್ಯ ಮತ್ತು ವೈಷ್ಣವ ಪಂಥದ ಪ್ರಭಾವಗಳನ್ನು ಅಭಿವ್ಯಕ್ತಪಡಿಸುತ್ತದೆ. ನಮ್ಮ ಯಕ್ಷಗಾನ, ಇಲ್ಲಿನ ದೇವಾಲಯ ಸಂಸ್ಕೃತಿ, ಆಚರಣೆಗಳು, ಸಾಮಾಜಿಕ ಜೀವನವಿಧಾನದ ಹೊಳಹುಗಳನ್ನು ಸಾದರಪಡಿಸುತ್ತದೆ.

ಒಳಾಂಗಣ ಪ್ರೇಕ್ಷಾಂಗಣದ ಕಲ್ಪನೆ ನಮ್ಮಲ್ಲಿಗೆ ಹೊರಗಿನಿಂದ ಬಂದದ್ದು. ಬ್ರಿಟಿಷರು ತಮ್ಮೊಡನೆ ''ಚಿತ್ರದ ಚೌಕಟ್ಟಿನಂತಹ'' ರಂಗ ಭೂಮಿಯ (Picture frame stage) ಅಥವಾ ಒಳಾಂಗಣ ರಂಗ ವ್ಯವಸ್ಥೆಯ ಕಲ್ಪನೆಯನ್ನು ತಂದರು. ಭಾರತದ ಮಹಾನಗರಗಳಲ್ಲಿ ಇಂತಹ ಥಿಯೇಟರಿನ ವ್ಯವಸ್ಥೆಗಳನ್ನು ಮಾಡಲಾಯಿತು.

ಆದರೆ ಇಂದಿಗೂ ಇಲ್ಲಿನ ಏಳುನೂರು ಸಾವಿರ ಹಳ್ಳಿಗಳಲ್ಲಿ ಜಾನಪದ ಕಲೆಗಳು ಹೊರಾಂಗಣ ಪ್ರದರ್ಶನದಿಂದಲೇ ಪ್ರೇಕ್ಷಕರನ್ನು ರಂಜಿಸುತ್ತಿವೆ. ಇದು ಹಾಡು, ನೃತ್ಯ, ಸಂಭಾಷಣೆ, ಅಭಿನಯ, ಆ್ಯಕ್ಷನ್ ಹೀಗೆ ಬಹುಪ್ರಕಾರಗಳನ್ನು ಒಟ್ಟಿಗೇ ಒಂದೇ ಪ್ರದರ್ಶನದಲ್ಲಿ ಪ್ರೇಕ್ಷಕರಿಗೆ ನೀಡಬಲ್ಲ ಜಾನಪದ ಕಲೆಗಳ ಶಕ್ತಿಯನ್ನು ಹೆಚ್ಚಿಸಿದೆ. ಹೊರಾಂಗಣ ಪ್ರೇಕ್ಷಾಂಗಣ, ಅವುಗಳ ರಂಗ ಕಲ್ಪನೆಯ ಕ್ರಿಯಾಶೀಲತೆಗೆ ಹೊಸ ಆಯಾಮಗಳನ್ನು ಒದಗಿಸಿದೆ. ಇಂಥ ಜಾನಪದ ಹಾಗೂ ಇತರೆ ಪ್ರಕಾರದ ನೃತ್ಯ ಸಂಗೀತ ಪ್ರದರ್ಶನಗಳ ಮಹತ್ವವನ್ನು ಪುನರ್ ಶೋಧಿಸುವುದು ಈ ಲೇಖನ ಮಾಲಿಕೆಯ ಉದ್ದೇಶ.

**(ಲೇಖಕಿ ಮುಂಬೈ ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಆಂಗ್ಲ ಸಾಹಿತ್ಯ ಸ್ನಾತಕೋತ್ತರ ಪದವಿ ಮತ್ತು ಪತ್ರಿಕೋದ್ಯಮ ಸ್ನಾತಕೋತ್ತರ ಡಿಪ್ಲೊಮ ವಿದ್ಯಾರ್ಥಿನಿ. ಸೃಜನಶೀಲ ರಂಗ ಚಟುವಟಿಕೆಗಳಲ್ಲಿ ಕ್ರಿಯಾಶೀಲೆ)**

••••••••••••••



# ಹಸ್ತ ಮಯೂರಿ

## ತ್ರಿಪತಾಕಹಸ್ತ:



**ನಾಟ್ಯಶಾಸ್ತ್ರವು** ಪ್ರತಿಯೊಂದು ಹಸ್ತಗಳಿಗೂ ಅದರ ಮೂಲ ಕಲ್ಪನೆ ಹೇಗೆ ಬಂತೆಂಬುದನ್ನು ತಿಳಿಸಿಕೊಡುತ್ತದೆ. ಕಳೆದ ಬಾರಿ ಚರ್ಚಿಸಲಾದ ಪತಾಕ ಹಸ್ತವು ಬ್ರಹ್ಮನು ಪರಬ್ರಹ್ಮನ ಬಳಿ ಜಯದ ಸಂಕೇತ ಎಂದು ಕೈಯನ್ನು ಧ್ವಜದಂತೆ ಕೊಂಡೊಯ್ಯುವಾಗ ಬಳಸಿದ್ದಾಗಿದೆ ಎನ್ನಲಾಗಿದೆ. ಪತಾಕ ಹಸ್ತದ ಬಣ್ಣ ಬಿಳಿ, ಬ್ರಾಹ್ಮಣ ವರ್ಣ, ಪರಬ್ರಹ್ಮ ದೇವತೆ, ಶಿವ ಋಷಿ. ಅಂತೆಯೇ ಈ ಬಾರಿ ಚರ್ಚಿಸಲಾಗುವ ಹಸ್ತ ತ್ರಿಪತಾಕ. ಇಂದ್ರನು ವಜ್ರಾಯುಧವನ್ನು ಎತ್ತಲು ಈ ಹಸ್ತದ ಉದ್ಭವವಾಯಿತೆನ್ನಲಾಗಿದೆ. ಇದರ ಬಣ್ಣ ಕೆಂಪು, ಕ್ಷತ್ರಿಯ ವರ್ಣ, ಗುಹ ಋಷಿ ಪರಬ್ರಹ್ಮ ದೇವತೆ.

**ಲಕ್ಷಣ:** ಅಭಿನಯ ದರ್ಪಣದಂತೆ ಉಂಗುರ ಬೆರಳನ್ನು ಮಡಿಸಿ, ಉಳಿದೆಲ್ಲಾ ಬೆರಳುಗಳನ್ನು ಜೋಡಿಸಿ ನೇರವಾಗಿ ಚಾಚಿ ಹಿಡಿಯುವುದು. ಇದೊಂದು ಪುರುಷಹಸ್ತ.ಕಥಕ್ಕಳಿಯಲ್ಲಿ ಪತಾಕವೆಂದು ಹೆಸರು.

**ಅಭಿನಯದರ್ಪಣ ತಿಳಿಸುವ ವಿನಿಯೋಗಗಳು:** ಕಿರೀಟ, ವಜ್ರಾಯುಧ, ಇಂದ್ರ, ಕೇತಕೀ ಪುಷ್ಪ, ದೀಪ, ಅಗ್ನಿಜ್ವಾಲೆಯ ವಿಜೃಂಭಣೆ, ಕೆನ್ನೆಗಳು, ಪತ್ರಬರೆಯುವುದು, ಬಾಣ, ಪರಿವರ್ತನೆ (ತಿರುಗುವುದು), ಸ್ತ್ರೀ ಪುರುಷರ ಸಮಾಯೋಗ, ಹಿಂದಿರುಗಿ ಬರುವುದು.

**ಇತರೆ ವಿನಿಯೋಗ (ನಾಟ್ಯಶಾಸ್ತ್ರ, ಲಾಸ್ಯರಂಜನ, ಸಾರಸಂಗ್ರಹ):** ಮರ, ಮುಖವನ್ನು ಮೇಲೆತ್ತುವುದು, ಕಣ್ಣೀರು ತೆಗೆಯುವುದು, ಮತ್ಸ್ಯ ಶ್ರೇಷ್ಠ, ಮುಂಗುರಳನ್ನು ನೇವರಿಸುವುದು, ವಾಹನ, ಅರಣ್ಯ, ಕಲಶ, ಕೋಪ, ಕನ್ನಡಿ, ತಿಲಕ, ದಂತಮಾರ್ಜನ, ತಾಳಪತ್ರ, ವಿಷ್ಣು, ವಿಸರ್ಜನೆ, ಅಧರ, ರಕ್ತವರ್ಣ, ಶುಭವಸ್ತು ಸ್ಪರ್ಶನ, ಯಾರನ್ನಾದರೂ

ಕಂಡುಕೊಳ್ಳಬಹುದು. ಅಷ್ಟಕ್ಕೂ ಹಿನ್ನೆಲೆಯನ್ನು ಸರಿಯಾಗಿ ನಿರೂಪಿಸಬೇಕು. ಕಲಾವಿದನ ಸ್ವಾನುಭವ, ಪರಿಶ್ರಮ, ಸಾಮಾನ್ಯ ಪ್ರಜ್ಞೆ ಮೇಳೈಸಬೇಕು. ಅಷ್ಟಕ್ಕೂ ನೃತ್ಯ ಮೂಕ ಭಾಷೆಯ ತರಹದ್ದೇನೂ ಅಲ್ಲವಲ್ಲ!...

**೩. ಶಾಸ್ತ್ರೀಯ ನೃತ್ಯಗಳು ದೈವೀಕವಾದುದು, ಭಗವಂತನಿಂದ ಬಂದುದು ಎಂಬ ಕಲ್ಪನೆಯ ಮೂಲೋದ್ದೇಶವೇನು?**

ಮೊದಲಿನಿಂದಲೂ ಜನರಿಗೆ, ದೊಡ್ಡದು ಎನ್ನುವ ಕಲ್ಪನೆ ದೇವರಿಂದ ಬಂದದ್ದು ಎಂದೇ ಇದೆ. ಒಂದು ವೇಳೆ ಹಾಗನ್ನದಿದ್ದರೆ ಅದು ಸಾಮಾನ್ಯವಾಗಿಯೇ ಹೋಗಿಬಿಡಬಹುದೇನೋ ಎಂಬ ಆತಂಕ. ಇದನ್ನು ಮನಗಂಡೇ ಪಾರಂಪರಿಕರು ವಿಶೇಷವಾದುದ್ದನ್ನು ಶಾಸ್ತ್ರ, ದೈವಿಕತೆಗೆ ಸಮೀಕರಿಸಿದರು. ದೈವಿಕ ಎಂದು ಹೇಳುವುದಕ್ಕೋಸ್ಕರ ಅಥವಾ ಒಂದು ವಿಶೇಷವಾದುದನ್ನು ಸಾಮಾನ್ಯವಾದುದಲ್ಲ ಎನ್ನಲು ಅದಕ್ಕೊಂದು ಶಾಸ್ತ್ರವನ್ನು ರಚಿಸಿದರು.

ಹಾಗೆ ನೋಡಿದರೆ ಸಾಮಾನ್ಯ ಜೀವನದ ಎಷ್ಟೋ ಅಂಶಗಳು ಭರತನಾಟ್ಯಕ್ಕೆ ನಿಕಟವರ್ತಿಯಾಗಿದೆ. ಅದರ ಸಂದರ್ಭೋಚಿತ, ಪಾತ್ರೋಚಿತ ಮತ್ತು ಉತ್ತಮ ನಿಭಾಯಿಸುವಿಕೆಗಾಗಿ ಶಾಸ್ತ್ರಗಳು ಸಹಕರಿಸುತ್ತವೆ. ಯಾವುದೇ ಕಲೆಯಾದರೂ ಅದು ಜೀವನದ ಸಾಂಕೇತಿಕ ಪ್ರತಿನಿಧಿ ಮತ್ತು ಸಾಕ್ಷಾತ್ಕಾರ ಪ್ರಕ್ರಿಯೆಗೆ ಪೂರಕ. ಜೀವನವನ್ನು ನೋಡಿ ಭರತನಾಟ್ಯವಾಗಲೀ, ಶಾಸ್ತ್ರವಾಗಲೀ ಬಳಕೆಗೆ ಬಂದಿದೆಯೇ ಹೊರತು ಶಾಸ್ತ್ರವನ್ನು ರೂಪಿಸಿ ಜೀವನವನ್ನು ಕಟ್ಟಿಕೊಂಡದ್ದಲ್ಲ...

**ಮುಂದಿನ ತಿಂಗಳ ಅತಿಥಿ...?**

■■■■■■■■■■■■■■■





ನರ್ತನ ಸುರಭಿ

## ಜತಿಸ್ವರ

✍ **ವೈಷ್ಣವಿ ಎನ್.**

**ಭ**ರತನಾಟ್ಯ ಕಾರ್ಯಕ್ರಮದಲ್ಲಿ ಪ್ರೇಕ್ಷಕರು ನೋಡುವ ಎರಡನೆಯ ಅಂಗವೇ ಜತಿಸ್ವರ . ಇದಕ್ಕೆ ಕರ್ಣಾಟಕ ಸಂಗೀತ ಸಂಪ್ರದಾಯದಲ್ಲಿ ಬರುವ ಸ್ವರಜತಿ ಎಂಬುದು ಆಧಾರ. ಸಂಗೀತ ವಿದ್ವಾಂಸರು ವಿದ್ಯಾರ್ಥಿಗಳಿಗೆ ಬೋಧನಾ ಸೌಕರ್ಯಕ್ಕಾಗಿ ರಚಿಸಿರುವ ಐದನೆಯ ಹಂತವೇ ಸ್ವರಜತಿ. ಇಲ್ಲಿ ಒಂದು ರಾಗದ ಆರೋಹಣ, ಅವರೋಹಣವನ್ನು ಅನುಸರಿಸಿ ಆ ರಾಗದ ಸ್ವರಗಳನ್ನು ಗುಂಪು-ಗುಂಪುಗಳಾಗಿ ವಿಂಗಡಿಸಿ ನಿರ್ದಿಷ್ಟ ರಾಗದ ಸೂಕ್ಷ್ಮ ಪರಿಚಯವನ್ನು ಮಾಡಿಕೊಡಲಾಗುತ್ತದೆ. ಸಂಗೀತಗಾರರು ಸ್ವರಗಳನ್ನು ಪ್ರಧಾನವಾಗಿ ಗಮನಿಸುವುದರಿಂದ ಮತ್ತು ವರ್ಣಕ್ಕೆ ತಳಹದಿಯಾಗಿ ರೂಪಿಸಿರುವ ರಚನೆಯಾದ್ದರಿಂದ ಸ್ವರಜತಿ ಎನಿಸಿಕೊಂಡಿದೆ. ಈ ಸ್ವರಜತಿಗಳನ್ನೇ ನೃತ್ಯ ಜೋಡಣೆಗೆ ಬಳಸಿಕೊಂಡಾಗ, ಅವುಗಳಿಗೆ ಜತಿಗಳಿಂದ ಕೂಡಿದ ಅಡವುಗಳನ್ನು ಸೇರಿಸುವುದರಿಂದ ಅದಕ್ಕೆ ಜತಿಸ್ವರ ಎಂಬ ಹೆಸರು ಬಂತೆನ್ನಲಾಗಿದೆ. ಅಂಗಾಂಗಗಳ ವಿಕ್ಷೇಪಣೆಯಿಂದ ನರ್ತಿಸುವ ಜತಿಸ್ವರ ಮೈಯಲ್ಲಿ ಲವಲವಿಕೆಯನ್ನು ತಂದು, ಪ್ರೇಕ್ಷಕರಿಗೆ ನೃತ್ತದ ವಿವಿಧ ರೀತಿಯ ಸುಂದರ ವಿನ್ಯಾಸಗಳನ್ನು ತೋರಿಸುತ್ತದೆ.

ಗಾನಕ್ಕೆ ಮುಖ್ಯವಾದದ್ದು ಸ್ವರ ಸ್ಥಾನ. ನೃತ್ತಕ್ಕೆ ಮುಖ್ಯವಾದದ್ದು ಲಯ ಸ್ಥಾನ. ಸಂಗೀತದಲ್ಲಿ ಸ್ವರ ಪ್ರಧಾನ; ಜತಿಗೌಣ. ಅದೇ ನೃತ್ತದಲ್ಲಿ ಜತಿ ಪ್ರಧಾನ; ಸ್ವರಗೌಣ. ಹಾಗಾಗಿ ಸ್ವರಜತಿ ಮತ್ತು ಜತಿಸ್ವರ ಎಂಬುದು ಒಂದರಿಂದ ಹುಟ್ಟಿದ ಇನ್ನೊಂದು ಪೂರಕ ಮತ್ತು ವಿಭಿನ್ನ ಭಾಗಗಳು. ಜತಿಸ್ವರವು ಸಾಹಿತ್ಯ ರಹಿತವಾದದು, ಶುದ್ಧ ನ್ಲತ್ತಜಾತಿಯದು, ಮಧ್ಯಲಯ ವೇಗವುಳ್ಳದ್ದಾಗಿದ್ದು, ಬೆರಳೆಣಿಸುವಷ್ಟು ವಿಳಂಬ ಕಾಲದಲ್ಲಿರುತ್ತದೆ.

ಸಂಗೀತರತ್ನಾಕರ ಮತ್ತು ದೇವೇಂದ್ರನ ಸಂಗೀತಮುಕ್ತಾವಳಿ ಗ್ರಂಥಗಳಲ್ಲಿ ವಿವರಿಸುವ ಯತಿನೃತ್ತ ಅಥವಾ ರಾಗಾನುರಾಗ ಅಥವಾ ರಾಗಾನುರಾಗತಿನೃತ್ತ ಎಂಬ ನೃತ್ತಗಳೇ ಇಂದಿನ ಜತಿಸ್ವರ ಎಂಬ ಅಭಿಪ್ರಾಯ ಕೆಲವರದದ್ದಾದರೆ, ಇನ್ನೂ ಕೆಲವು ವಿದ್ವಾಂಸರು ಸಾದಿರ್ ಸಮಯದಲ್ಲಿಯೇ ಜತಿಸ್ವರದ ರಚನೆಯಾಗಿದೆ ಎನುತ್ತಾರೆ. ಯತಿ ಎಂಬುದು ಜತಿಯ

ಹಳೆಯ ಹೆಸರು. ಹಲವು ನಿರ್ದಿಷ್ಟವಾದ ಚಲನೆಗಳು ಜತಿಸ್ವರವನ್ನು ಗುರುತಿಸುತ್ತದೆ ಎನ್ನಲಾಗಿದೆ. ಉದಾಹರಣೆಗೆ:

ಸ್ವರ: ಸಾ ನಿಸರಿಸಾ ನಿದಪದ ನೀ ದಪಮಗಾ ಮಪದನಿ

ಜತಿ: ತಾಕುಜಣಂತರಿ ತತಕುಜಣಂತರಿ ತಕಿಟಝುಂ ತಕಿಝುಂಝುಂತ

ಈ ರೀತಿ ಅನೇಕ ವಿಧವಾಗಿ ಜತಿಗಳನ್ನು ನೃತ್ತದಲ್ಲಿ ಅಳವಡಿಸುವುದು ಸಂಪ್ರದಾಯವಾಗಿ ರೂಢಿಗೆ ಬಂದಿದೆ. ಜತಿ, ಜೊತೆ, ಜೋಡಿ, ಗುಂಪು-ಇವೆಲ್ಲವೂ ಸಮಾನಾರ್ಥಕ ಪದಗಳು.ಸ್ವರಜಾತಿಗಳಲ್ಲಿ ಮೊದಲನೆಯ ಸ್ವರಗುಚ್ಛಕ್ಕೆ ಪಲ್ಲವಿ ಎಂದೂ ಅನಂತರದಲ್ಲಿ ಬರುವ ಸ್ವರ ಸಂಚಾರಕ್ಕೆ ಅನುಪಲ್ಲವಿ, ಚರಣಗಳೆಂದು ಹೆಸರು.

ಸ್ವರಜತಿಗಳನ್ನೂ ನೃತ್ತಕ್ಕೆ ಅಳವಡಿಸುವ ಪುರಾತನ ಪದ್ಧತಿ ಈಗ ಅಪರೂಪವಾಗುತ್ತಿದೆ. ಈಗ ಪ್ರಚಲಿತದಲ್ಲಿರುವ ನೃತ್ಯಕ್ಕೆ ಅಳವಡಿಸಲಾದ ಸ್ವರಜತಿಗಳ ಪೈಕಿ ಬಿಲಹರಿರಾಗ, ಆದಿತಾಳದ ಸಾರಿಗಾಪದಾಸನೀದ (ರಾರವೇಣುಗೋಪಾಲ) ಪ್ರಮುಖವಾದುದು.

ಜತಿಸ್ವರದಲ್ಲಿನ ನಟುವಾಂಗ ಅಲರಿಪುವಿನಂತಿರದೆ ಸ್ವಲ್ಪ ಭಿನ್ನವಾಗಿರುತ್ತದೆ. ಸ್ವರಗಳ ಶಬ್ದೋಚ್ಚಾರಣೆಯು ನಾಲ್ಕು ಮಾತ್ರ ಕಾಲದಲ್ಲಿದ್ದರೂ ಜತಿಗಳು ಚತುರಶ್ರ, ತಿಶ್ರ, ಖಂಡ, ಮಿಶ್ರ, ಸಂಕೀರ್ಣ, ಇತ್ಯಾದಿ ನಡೆಗಳಿಂದ ಕೂಡಿದ್ದು ಪಾದಗತಿಗಳನ್ನು ನಟುವಾಂಗವು ಸೂಚಿಸುತ್ತದೆ. ಯಾವ ತಾಳ, ರಾಗದಲ್ಲಾದರೂ ಇರುವ ಸ್ವರಜತಿಗಳನ್ನು ಆರಿಸಿಕೊಳ್ಳಬಹುದು. ಆಯಾ ರಾಗದ ಸ್ವರಗಳ ಜೋಡಣೆ ಪೂರಕವಾಗಿರುವಂತೆ ಜತಿಸ್ವರದ ನೃತ್ತವನ್ನು ಹೊಂದಿಸಲಾಗುತ್ತದೆ. ಆದರೆ ಒಂದೇ ತಾಳದ ಬೇರೆ ಬೇರೆ ರಾಗದ ಜತಿಸ್ವರಕ್ಕೆ ಒಂದೇ ರೀತಿಯ ನೃತ್ತವನ್ನು ಹೊಂದಿಸುವುದು ಅಷ್ಟು ಸಮಂಜಸವಲ್ಲ. ತಾಳ ವೈವಿಧ್ಯ ಮತ್ತು ಕೈಕಾಲು ಚಲನೆಗಳಿಂದ ಕೂಡಿದ ಇದು ಅಲರಿಪುವಿಗಿಂತ ತುಸು ಕಷ್ಟಕರವಾದರೂ ಇದನ್ನು ನರ್ತಿಸಲು ಆಯಾಸಕರವಲ್ಲ.

ಸಾಮಾನ್ಯವಾಗಿ ಯಾವುದಾದರೂ ರಾಗದ ಸ್ವರಗಳ ಜೋಡಣೆಯನ್ನು ಆದಿತಾಳ, ರೂಪಕತಾಳ ಅಥವಾ ಮಿಶ್ರಛಾಪುತಾಳಗಳಲ್ಲಿ ಮಾಡಿ ಈ ಸ್ವರಜೋಡಣೆಯ ಆವರ್ತಗಳಿಗೆ ಸರಿಯಾಗಿ ಅಡವುಗಳನ್ನು ಪೋಣಿಸಿ ಮುಕ್ತಾಯ ಅಡವುಗಳಿಂದ ಕೊನೆಗಾಣಿಸಿದರೆ, ಅಂದರೆ ಜತಿಗಳನ್ನು ಕಲ್ಪಿಸಿದರೆ ಜತಿಸ್ವರವಾಗುತ್ತದೆ. ಇದನ್ನು ಎರಡು ಕಾಲಗಳಲ್ಲಿ ಮಾಡಬಹುದು.

ಜತಿಸ್ವರದ ಪಲ್ಲವಿಗೆ ಒಂದು ರಾಗ ನಿಯೋಜಿಸಿ ಆ ಛಂದೋಗತಿಯ ತರಂಗಕ್ಕೆ ತಾಳಗತಿಯ ಚಲನೆ ನೀಡುತ್ತಾರೆ. ಜತಿಯ ನಡೆಯ ವೇಗಕ್ಕೆ ಒಂದು ಗತಿಯನ್ನು ಪ್ರೇರಕ



**೨. ಪರಂಪರೆಯಿಂದ ಬಂದದ್ದನ್ನು ತನ್ನ ಅನುಭವಕ್ಕೆ ಅನುಸಾರವಾಗಿ ಕಲಾವಿದ ಬದಲಾವಣೆ ಮಾಡಿಕೊಳ್ಳಬಹುದೇ? ಮಾಡಿಕೊಳ್ಳಬಹುದು ಎನ್ನುವುದಾದರೆ ಎಷ್ಟು ಸರಿ?**

...ಬದಲಾವಣೆಗಳು ತಪ್ಪಲ್ಲ. ನಾಟ್ಯಶಾಸ್ತ್ರ, ಅಭಿನಯ ದರ್ಪಣಗಳ ಬಹಳಷ್ಟು ವಿಷಯಗಳಲ್ಲೇ ಬದಲಾವಣೆಗಳಾಗಿರುವುದನ್ನು ಕಾಣಬಹುದು. ಏಕೆಂದರೆ ನೃತ್ಯಾದಿ ಕಲೆಗಳು ಶ್ರುತಿ ಪರಂಪರೆಯವು; ಅಂದರೆ ಗುರುಗಳಿಂದ ಶಿಷ್ಯರಿಗೆ, ಅವರಿಂದ ಮತ್ತವರ ಶಿಷ್ಯರಿಗೆ...ಹೀಗೆ ಬೋಧಿಸಿಕೊಂಡು ಬಂದ ಕಲೆಯಾದ್ದರಿಂದ ಕಾಲಾಂತರದಲ್ಲಿ ಬದಲಾವಣೆಗಳಾಗಿರುವ ಸಂಭವಗಳಿವೆ.

ಸ್ಥಳ, ಸ್ಥಿತಿಗಳಿಗನುಗುಣವಾಗಿ ಕಲೆಯೊಂದರ ವಸ್ತುವಿಶೇಷಗಳನ್ನು ಅರ್ಥೈಸಿಕೊಳ್ಳುವ ಶಕ್ತಿಯೂ ಬದಲಾಗುತ್ತಾ ಸಾಗುತ್ತದೆ. ಅದರಲ್ಲೂ ಪಾತ್ರಗಳ ಔಚಿತ್ಯ, ಹಿನ್ನೆಲೆಗನುಗುಣವಾಗಿ ಸ್ಥಿತ್ಯಂತರಗಳೇರ್ಪಡುತ್ತವೆ. ಹಾಗಾಗಿ ಬದಲಾಗುವ ಕಾಲಘಟ್ಟದಲ್ಲಿ ಬದಲಾವಣೆಗಳೂ ಅನಿವಾರ್ಯ. ಆದರೆ ಕಲಾವಿದ ಈ ರೀತಿ ವಿಸ್ತರಣಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವಾಗ ಚಿಂತನೆ, ಅವಲೋಕನವೂ ಆಗಬೇಕು.

ಇನ್ನು ಈ ಬದಲಾವಣೆ ಎಷ್ಟು ಸರಿ ಎನ್ನುವುದಾದರೆ.., ಕಲೆ ಮತ್ತು ಅದರ ಪ್ರಗತಿ ಸಮಕಾಲೀನ. ಹಾಗಾಗಿ ಶಾಸ್ತ್ರವಿರುದ್ಧ ಎಂಬುದು ಯಾವುದು ಇಲ್ಲ. ಸಂಸ್ಕೃತಿಯೆಂಬ ಭಾಷೆಯಲ್ಲೇ ಹಲವು ಬದಲಾವಣೆಗಳಾಗಿವೆ. ಈಗ ನಾವು ಆಚರಿಸುತ್ತಿರುವ ಸಂಪ್ರದಾಯವಾದರೂ, ಶಾಸ್ತ್ರವಾದರೂ ನಮ್ಮ ಇತ್ತೀಚೆಗಿನ ಹಿಂದಿನ ಇತಿಹಾಸ ಅಷ್ಟೆ! ಹಾಗೆ ನೋಡುವಾಗ ಈಗ ಆಚರಿಸುವ ದಿನನಿತ್ಯದ ಎಷ್ಟೋ ಸಂಪ್ರದಾಯಗಳು ೨೦೦೦ ವರ್ಷದ ಹಿಂದೆ ಬೇರೆಯೇ ಇದ್ದಿರಬಹುದಲ್ಲಾ! ಹಾಗಾಗಿ ವಸ್ತುಸ್ಥಿತಿಗೆ ತಕ್ಕಂತೆ, ಶಾಸ್ತ್ರದ ಮೂಲ ಆಶಯ-ಅಧ್ಯಯನಕ್ಕೆ ಧಕ್ಕೆ ಬಾರದ ರೀತಿಯಲ್ಲಿ, ಪ್ರೇಕ್ಷಕರಿಗೆ ಅರ್ಥವಾಗುವಂತೆ ಬದಲಾವಣೆ ಮಾಡಿಕೊಳ್ಳುವುದರಲ್ಲಿ ತಪ್ಪೇನಿಲ್ಲ.

ಉದಾ: ಮುಷ್ಟಿ ಹಸ್ತವನ್ನು ಸ್ಕೂಟರ್, ಕಾರು ಬಿಡುವಂತೆ ಉಪಯೋಗಿಸಿಕೊಂಡರೂ ಅದು ಇಂದಿನ ವಾಹನ ಎಂಬ ಸೂಚನೆಗೆ ಸಮರ್ಥನೀಯವೂ, ಅರ್ಥಗ್ರಾಹ್ಯವೂ ಆಗಿರುತ್ತದೆ. ಹಾಗಾಗಿ ಶಾಸ್ತ್ರ ಬಿಟ್ಟು ಹೋಗುವುದು ಎಂಬ ಮಾತಿನಲ್ಲಿ ಹುರುಳಿಲ್ಲ. ನಾವು ನಮ್ಮ ಮಹಾಭಾರತದ ಗದಾಯುದ್ಧ ಭಾಗದಲ್ಲಿ ಕರಾಟೆಯ ಪಟ್ಟುಗಳನ್ನು ನೃತ್ಯಸಂಬಂಧಿಯಾಗಿ ಬಳಸಿಕೊಂಡಿದ್ದೇವೆ. ಅದು ಇನ್ನಷ್ಟು ಪರಿಣಾಮಕಾರಿ ನೃತ್ಯ ಚಲನೆ, ಸಂವಹನ ಕೊಡುತ್ತದೆ. ಹಾಗಾಗಿ ಸೃಜನಶೀಲತೆ, ಅಧ್ಯಯನದ ಮುಖಾಂತರ ಕಲಾವಿದ ಹೊಸ ಅರ್ಥಗಳನ್ನು

ಪ್ರೇಕ್ಷಕನನ್ನು ತಲುಪಬಲ್ಲ. ಅದು ಅಂತರಂಗದಿಂದ ಅಭಿನಯ ಹುಟ್ಟಿದಾಗಲಷ್ಟೇ ಸಾಧ್ಯ.

ಉದಾ: ದೇವತೆಗಳನ್ನು ಅವರುಗಳ ಆಯುಧದ ಮೂಲಕ ಗುರುತಿಸಿ ಅವರುಗಳಿಗಾಗಿ ಹಸ್ತಗಳನ್ನು ಮಾಡಲಾಗಿದೆ. ಆದರೆ ಬರಿಯ ಹಸ್ತಗಳನ್ನಷ್ಟೆ ಪ್ರರ್ದಶಿಸಿದರೆ ಅದು ಸರಿಯಾಗಿ ಸಂವಹನವಾಗಲಾರದು. ಬದಲಾಗಿ ಪಾತ್ರದ ಸ್ವಭಾವ, ಹವ್ಯಾಸಗಳು ಅಭಿನಯದಲ್ಲಿ ಕೂಡಿಬರಬೇಕು. ವಸ್ತು ಅಥವಾ ಆಯುಧ ಹಿಡಿದುಕೊಂಡ ವ್ಯಕ್ತಿಯನ್ನು ಗಮನಕ್ಕೆ ತರುವ ಹಾಗಿರಬೇಕು. ಈ ಮಾತು ವಾಚಿಕಕ್ಕೂ ಅನ್ವಯವಾಗುತ್ತದೆ. ವಾಚಿಕಕ್ಕೂ ಸಾತ್ವಿಕದ ಸಹಕಾರ ಬೇಕೇಬೇಕು. ಆಗ ಆ ಮಾಧ್ಯಮಕ್ಕೂ ಅರ್ಥ ಬರುತ್ತದೆ.

ನೃತ್ಯಗುರುಗಳು ನೃತ್ಯ ಕಲಿಸುವಾಗ ಮೊದಲು ಹಸ್ತಭಾಷೆಯನ್ನು ಹೇಳಿಕೊಟ್ಟು ಅದರಂತೆಯೇ ವಿನಿಯೋಗಗಳನ್ನು ನೃತ್ಯದಲ್ಲಿ ಬಳಕೆ ಮಾಡಬೇಕೆಂದು ಹೇಳುತ್ತಾರೆ. ಕಾರಣ, ವಿದ್ಯಾರ್ಥಿಗಳಿಗೆ ನಾಯಕ ನಾಯಕಿಯರ ಅಭಿವ್ಯಕ್ತಿಗೆ ಬೇಕಾದ ಜೀವನಾನುಭವ ಇರುವುದಿಲ್ಲ. ಆ ಅನುಭವ ಇಲ್ಲದೆ ರಸ–ಭಾವಗಳ ಸೂಕ್ತ ಅಭಿವ್ಯಕ್ತಿ ಅಸಾಧ್ಯ.

ವಿರಹ ಮುಂತಾದ ವಿಷಯಗಳನ್ನು ಚಿಕ್ಕ ಮಕ್ಕಳು ಅನುಭವಿಸಿ ಮಾಡಲಾರವು. ಆದ್ದರಿಂದ ಹಸ್ತಭಾಷೆಗಳ ಮುಖಾಂತರ, ಅಂಗಾಂಗ ಚಲನೆಯ ಸಹಾಯದಿಂದ, ಅವರನ್ನು ದೈಹಿಕವಾಗಿ ನೃತ್ಯಕ್ಕೆ ಸಿದ್ಧಮಾಡಲಾಗುತ್ತದೆ. ಪ್ರಾಥಮಿಕ ಹಂತದಲ್ಲಿ ಆಂಗಿಕವೇ ಪ್ರಮುಖ. ಆದರೆ ಸಾತ್ವಿಕವೇ ಅಂತಿಮ. ವಾಚಿಕ, ಆಂಗಿಕ, ವೇಷಭೂಷಣಗಳು ಸಾತ್ವಿಕಕ್ಕೆ ಪೂರಕ. ಪಾತ್ರದ ಒಳಗೆ ಹೊಗುತ್ತಾ, ಹೋಗುತ್ತಾ ಸಾತ್ವಿಕ ಅಭಿನಯಕ್ಕೆ ಹೆಚ್ಚು ಮಹತ್ವ ಕೊಟ್ಟಾಗ ನೃತ್ಯವನ್ನು ಕಲಾವಿದ ಪ್ರೇಕ್ಷಕರ ಬಳಿಗೆ ಕೊಂಡೊಯ್ಯಬಲ್ಲ. ಅದಿಲ್ಲದೇ ಬರಿಯ ಹಸ್ತಚಲನೆ, ವೇಷಭೂಷಣಗಳಿಂದಷ್ಟೇ ಭಾವವನ್ನು ವ್ಯಕ್ತಪಡಿಸಲು ಹೊರಟರೆ ಅಪ್ರಬುದ್ಧವೆನಿಸಿಕೊಳ್ಳುತ್ತದೆ.

ಸಾತ್ವಿಕಕ್ಕೆ ಮಹತ್ವ ಕೊಟ್ಟಂತೆಲ್ಲಾ ಅಂದರೆ ಮನಸ್ಸಿನ ಭಾವನೆ, ತಾದಾತ್ಮ್ಯತೆಯನ್ನು ಒಳಗೊಳ್ಳುತ್ತಾ ಹೋದಂತೆ ಕ್ರಮೇಣ ಇತರ ಹಸ್ತ, ಚಲನೆ, ಭಂಗಿಗಳು ಗೌಣವಾಗಲೇಬೇಕು. ಸಾತ್ವಿಕದ ಮೇಲೆ ಅವಲಂಬನೆ ಹೆಚ್ಚಾದಂತೆ ಉಳಿದವುಗಳ ಮೇಲಿನ ಅವಲಂಬನೆ ಕಡಿಮೆ ಆಗುತ್ತದೆ. ಹಾಗೆಂದು ಹಸ್ತಕ್ಷೇತ್ರ, ಪಾದ ಚಲನೆಗಳನ್ನು ನಿರ್ಲಕ್ಷಿಸಹೊರಟರೆ ದೇಹದ ಆಂಗಿಕ ಲಯ ತಪ್ಪುತ್ತದೆ. ಆಂಗಿಕ ವಿನ್ಯಾಸಗಳನ್ನು ನಿರ್ಲಕ್ಷಿಸುವುದೂ ಒಳಿತಲ್ಲ. ಹದವಾದ ಸಮ್ಮಿಲನ ನೃತ್ಯದಲ್ಲಿ ಮೂಡಬೇಕು.



ವಾಗಿಟ್ಟಿರುತ್ತಾರೆ. ಅಡವುಗಳ ರೀತಿ ಮತ್ತು ಹೊಂದಾಣಿಕೆಯಲ್ಲಿ ಕಲಾತಂತ್ರ ಆವಶ್ಯಕ. ಸಾಧಾರಣವಾಗಿ ಒಂದು ಜತಿಯನ್ನು ಮತ್ತು ೨ ಅಥವಾ ೨ಕ್ಕಿಂತ ಹೆಚ್ಚಿನ ಕೋರ್ವೆಗಳನ್ನು, (ಕೋರ್ವೆಯೆಂದರೆ ಜತಿಗಳಂತೆ ಬಾಯಲ್ಲಿ ಪಾಠಾಕ್ಷರಗಳನ್ನು ಹೇಳದೆ ಸ್ವರಗಳಿಗೆ ಸಂಯೋಜಿಸಿದ ಅಡವುಗಳ ಸರಣಿಯನ್ನು ನರ್ತಿಸುವ ಕ್ರಮ) ಅಳವಡಿಸಲಾಗುತ್ತದೆ. ತದನಂತರ ಅನುಪಲ್ಲವಿ, ಚರಣಗಳಿಗೆ ನರ್ತಿಸಲಾಗುತ್ತದೆ. ವಿವಿಧ ಅಡವುಗಳ ಜೋಡಣೆ, ಮತ್ತು ಮುಕ್ತಾಯವಿರುವ ಜತಿಸ್ವರದಲ್ಲಿ ಕೋರ್ವೆಗಳನ್ನು ಪಲ್ಲವಿಯ ಹಾಡುಗಾರಿಕೆಗೆ ಸಂಯೋಜಿಸಲಾಗುತ್ತದೆ. ಇದು ಸಂಯೋಜಕರ ಜಾಣ್ಮೆ, ಸಾಮರ್ಥ್ಯ ಕೌಶಲ್ಯ, ಊಹೆಗೆ ದ್ಯೋತಕವಾಗಿರುತ್ತದೆ. ಜತಿಸ್ವರದ ನಡೆಗಳು ಮತ್ತು ಸಂಗೀತದ ಸ್ವರಗಳಲ್ಲಿ ಮನಸ್ಸಿನ ಭಾವಕ್ಕೆ ಮಿಡಿಯುವ ಹೊಂದಾಣಿಕೆ ಕಲಾವಿದೆಯ ಯೋಗ್ಯತೆಯನ್ನು ತಿಳಿಸುತ್ತದೆ.

ಜತಿಗಳು ಪ್ರಾರಂಭದಲ್ಲಿ ಸಾಮಾನ್ಯವಾಗಿ ಕಂಡರೂ, ಮುಂದೆ ಸಂಕೀರ್ಣತೆ ಹೊಂದಿ ಜಟಿಲಗೊಳ್ಳುತ್ತದೆ. ತಾಂಡವ ಮತ್ತು ಲಾಸ್ಯ ಶೈಲಿಯಲ್ಲಿ ಅಡವುಗಳನ್ನು ಉಪಯೋಗಿಸಬಹುದೆನ್ನಲಾಗಿದ್ದು, ನರ್ತನದ ಸೌಷ್ಟವಕ್ಕೆ ಸರಿಯಾಗಿ ಬಲ ಮತ್ತು ಎಡ ಪಾರ್ಶ್ವಗಳ ಚಲನೆ ಅಡವಿನಲ್ಲಿ ಏಕ ಪ್ರಕಾರತೆಯಿರುತ್ತದೆ. ಸ್ವರಗಳ ಜೋಡಣೆಯೂ ಇದನ್ನು ಅನುಸರಿಸುತ್ತವೆ. ನಡು ನಡುವೆ ಸ್ವರಗಳ ಹೊಂದಾಣಿಕೆಯಲ್ಲಿ ಗತಿಯವೇಗ, ಸ್ವರಗಳ ನಡುವಿನ ದೂರ ಇತ್ಯಾದಿಗಳನ್ನು ಸಮನಾಗಿ ಹಂಚಿ ಹೇಳುವಾಗ ನರ್ತಕಿಯೂ ಇದೇ ಜಾಡನ್ನು ಅನುಸರಿಸತಕ್ಕದ್ದು. ಜತಿಗಳನ್ನು ಹಲಪ್ರಕಾರವಾಗಿ ಮಾಡಿದರೂ, ಅನುಪಲ್ಲವಿ ಮತ್ತು ಚರಣಸ್ವರಗಳಲ್ಲಿ ನರ್ತನವು, ಸ್ವರದ ಭಾವ ಮತ್ತು ನಡೆಯನ್ನು ಅನುಸರಿಸಬೇಕು. ದೇಹವನ್ನು ಬಗ್ಗಿಸುವಲ್ಲಿ ಉತ್ಪ್ಲವನ, ಭ್ರಮರಿಗಳು, ಕೈಚಲನೆ, ಗ್ರೀವಾರೇಚಕಗಳು, ಕಾಲುಗಳ ಚಾರಿಗಳು ನಡೆಗಳು, ಎಲ್ಲವೂ ರಾಗದ ಗಮಕಗಳಿಗೆ ತಾಳದ ಅಕ್ಷರ ಕಾಲಗಳಗೆ ತಕ್ಕಂತಿರಬೇಕು.

ಅಲರಿಪು ಆದಕೂಡಲೇ ನರ್ತಿಸುವ ಈ ನೃತ್ತಬಂಧಕ್ಕೆ ಯಾವ ಅರ್ಥವೂ ಇಲ್ಲ ಎನ್ನುವುದು ಕೆಲವು ನರ್ತಕರ ಅನಿಸಿಕೆ. ಆದರೆ ನರ್ತಕರು ಕೊಡುತ್ತಿರುವ ವಿವರಣೆಯಲ್ಲಿ ನಿಶ್ಚಿತಾಭಿಪ್ರಾಯ ಕಂಡುಬರುವುದಿಲ್ಲವೆಂದು ವಿಮರ್ಶಕರು ತರ್ಕಿಸುತ್ತಾರೆ. ಉದಾಹರಣೆಗೆ: ಜತಿಸ್ವರದಲ್ಲಿ ನಿರ್ದಿಷ್ಟವಾದ ವಸ್ತು ಇಲ್ಲ. ಇದು ಭಾವನಾಪೂರ್ಣವಾದ ಭಂಗಿಗಳನ್ನು ಒಳಗೊಂಡ ತಾಳಾನುಗುಣವಾದ ಚಲನೆ. ತಾಳದ ವಿವಿಧರೂಪಗಳು ಇದರಲ್ಲಿ ಪ್ರದರ್ಶಿಸುತ್ತವೆ ಎಂದು ಹೊಸ ತಲೆಮಾರಿನವರು ವ್ಯಾಖ್ಯಾನಿಸುತ್ತಾರೆ. ಆದರೆ ವಿಮರ್ಶಕರು ಈ ಪ್ರಶ್ನೆಗಳನ್ನು ಮುಂದಿಡುತ್ತಾರೆ.

೧. ನಿರ್ದಿಷ್ಟವಾದ ವಸ್ತು ಇರುವುದಿಲ್ಲ ಎಂದ ಮೇಲೆ ಒಂದು ಕ್ರಮವನ್ನು

ಅನುಸರಿಸಲು ಸಾಧ್ಯವೇ?

೨. ಪ್ರಾರಂಭಿಸಿದ ನೃತ್ತವು ಪೂರ್ಣವಾಗಲು ಯಾವುದಾದರೊಂದು ಆಧಾರವಿಲ್ಲದಿದ್ದಲ್ಲಿ ಇದನ್ನು ರೂಪಿಸಲು ಹೇಗೆ ಸಾಧ್ಯ?

೩. ಯಾವ ಉದ್ದೇಶಕ್ಕೂ ಕಟ್ಟುಪಾಡಿಗೂ ಒಳಪಡದ ಶಿಕ್ಷಣವನ್ನು ಶಾಸ್ತ್ರೀಯವೆನ್ನಲಾದೀತೇ?

೪. ಭಾವನಾಪೂರ್ಣವಾದ ಭಂಗಿಗಳನ್ನೊಳಗೊಂಡ ತಾಳಾನುಗುಣವಾದ ಚಲನೆ ಎಂದಾದಲ್ಲಿ ಒಂದು ಭಂಗಿಯು ಭಾವಪೂರ್ಣವಾಗಬೇಕಾದಲ್ಲಿ ಆ ಭಾವಕ್ಕೆ ಪೂರ್ವಸಂದರ್ಭಗಳೇನು? ಮತ್ತು ಯಾವ ಭಾವ?

ಆದ್ದರಿಂದ ವಿಮರ್ಶಕರು ಬೇರೆಯದೇ ನಿಟ್ಟಿನಲ್ಲಿ ತಮ್ಮ ವಾದಕ್ಕೆ ಪುಷ್ಟಿ ದೊರಕಿಸಿಕೊಡುತ್ತಾರೆ- ಅಲರಿಪು ನೃತ್ತವು ಯಾವ ಅಭಿಪ್ರಾಯದಿಂದ ಪ್ರಾರಂಭವಾಯಿತೋ ಅದೇ ರೀತಿ, ಜತಿಸ್ವರವು ಸಹ ಅದೇ ಅರ್ಥದಲ್ಲಿ ತದನುವರ್ತಿಯಾಗಬೇಕಾದದ್ದು ಯುಕ್ತ. ನಾಟ್ಯದ ಉದ್ದಿಷ್ಟ ಗುರಿಯನ್ನು ಮೆಟ್ಟಿಲಿನ ಕ್ರಮದಲ್ಲಿ ಮುಟ್ಟುವುದೇ ಸಾಂಪ್ರದಾಯಿಕ ಆಚಾರ್ಯರು ಮಾಡಿರುವ ಉಪಾಯ.

ಜೊತೆಗೆ ಭರತಾಚಾರ್ಯನು ತನ್ನ ಐದನೆಯ ಅಧ್ಯಾಯದಲ್ಲಿ ವಿವರಿಸಿದಂತೆ ಶಾಸ್ತ್ರೀಯ ನಾಟ್ಯದಲ್ಲಿ ಸೇರಿಕೊಂಡಿರುವ ಅಂಶಗಳು ವೇದವಿದ್ಯೆ, ಇತಿಹಾಸ, ಕರ್ಮ, ಶಿಲ್ಪ, ಯೋಗ ಇವುಗಳಲ್ಲಿ ಯಾವುದಾದರೂ ಒಂದು ಭಾಗವು ಕಂಡುಬಂದರೂ ಶಾಸ್ತ್ರೀಯವೆನ್ನಲು ಅಡ್ಡಿಯಿಲ್ಲ. ಹಾಗಲ್ಲದೇ ಹೋದಲ್ಲಿ ತಾಳ- ಲಯಬದ್ಧವಾಗಿ ಕುಣಿಯುವ ಕುಣಿತವೆಲ್ಲಾ ಭರತನಾಟ್ಯವೆಂದೂ ಶಾಸ್ತ್ರೀಯವೆಂದೂ ಹೇಳಬೇಕಾಗುತ್ತದೆ. ಆದ್ದರಿಂದ ಶಾಸ್ತ್ರದ ಯಾವುದಾದರೊಂದು ಅಂಶವು ಪ್ರಧಾನವಾಗಿಯೂ, ಉಳಿದವು ರಂಜನಾದೃಷ್ಟಿಯಿಂದ ಸೇರಿ ನೃತ್ತ-ನೃತ್ಯಗಳು ರೂಪುಗೊಂಡಲ್ಲಿ ಅದನ್ನು ಶಾಸ್ತ್ರೀಯವೆಂದು ಒಪ್ಪಿಕೊಳ್ಳಬಹುದು ಎನ್ನಲಾಗಿದೆ. ಈ ನಿಟ್ಟಿನಲ್ಲಿ ತರ್ಕಿಸಿದರೆ ಜತಿಸ್ವರದಲ್ಲಿನ ನೃತ್ತವಿನ್ಯಾಸಗಳು ಅರ್ಥಪೂರ್ಣವೂ, ನಿರ್ದಿಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸುವವೂ ಎಂದು ಹೇಳಬಹುದು. ಇದನ್ನು ಇಂದಿಗೂ ಪುರಾತನ ಪದ್ಧತಿ, ಸಂಪ್ರದಾಯ ನಿಷ್ಠತೆಯನ್ನು ಅನುಸರಿಸಿಕೊಂಡು ಬರುತ್ತಿರುವ ಹಳೆಯ ಕಾಲದ ಕಲಾವಿದೆಯರು ಪ್ರದರ್ಶಿಸುವ ಹಸ್ತವಿನ್ಯಾಸಗಳನ್ನು ಪರಿಶೀಲಿಸಿದಲ್ಲಿ ಪೂರ್ವಾಚಾರ್ಯರ ಅಭಿಪ್ರಾಯ ಸ್ಪಷ್ಟವಾಗಿ ತಿಳಿಯುತ್ತದೆ ಎಂದು ಮಂಡಿಸುತ್ತಾರೆ ವಿಮರ್ಶಕರು.



# ದರ್ಶನ ಭ್ರಮರಿ



## ವಿದ್ವಾನ್ ಶ್ರೀಧರ್

**ಶ್ರೀಧರ್** ಅವರನ್ನು ಯಾರಿಗೆ ತಾನೇ ತಿಳಿದಿಲ್ಲ? ಚಲನಚಿತ್ರ ಕಲಾವಿದರಾಗಿ, ಹೆಸರಾಂತ ಭರತನಾಟ್ಯ ಪಟುವಾಗಿ ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಜನಜನಿತ. ಪತ್ನಿ ಅನುರಾಧಾ ಶ್ರೀಧರ್ ಅವರ ಜೊತೆಗೂಡಿ ಅವರು ನಡೆಸಿಕೊಟ್ಟ ಕಾರ್ಯಕ್ರಮಗಳು, ನೃತ್ಯ ವೈವಿಧ್ಯಗಳು, ಉಪನ್ಯಾಸ-ಕಾರ್ಯಾಗಾರಗಳು ಸುಮಾರು ೨೦೦೦ ಕ್ಕಿಂತಲೂ ಹೆಚ್ಚು. ಬೆಂಗಳೂರಿನಲ್ಲಿ ಖೇಚರ ಅಕಾಡೆಮಿ ಆಫ್ ಭರತನಾಟ್ಯಂ ಎಂಬ ಸಂಸ್ಥೆಯನ್ನು ಹುಟ್ಟುಹಾಕಿ ನೃತ್ಯಲೋಕದ ಆರಾಧನೆ ನಡೆಸುತ್ತಿರುವ ಇವರು, ರಾಮಾಯಣ ಮಹಾಭಾರತದಂತಹ ಮಹಾಕಾವ್ಯಗಳ ಸಾರಸತ್ವವನ್ನು ತಮ್ಮ ನೃತ್ಯರೂಪಕಗಳಲ್ಲಿ ಸಮರ್ಥವಾಗಿ ನಿರ್ವಹಿಸಿ ವಿದೇಶಗಳಲ್ಲಿಯೂ ಕಂಪನ್ನು ಹರಡಿ ಪ್ರೇಕ್ಷಕರ ಮನಸ್ಸನ್ನು ಗೆದ್ದಿದ್ದಾರೆ! ಶ್ರೀಧರ್-ಅನುರಾಧಾಶ್ರೀಧರ್ ನೃತ್ಯಜೋಡಿ ರಂಗಕ್ಕೆ ಕಾಲಿಟ್ಟಿತೆಂದರೆ ಎಲ್ಲರ ಕಣ್ಣುಗಳೂ ಅರಳುತ್ತವೆ. ಇವರು ಈ ತಿಂಗಳ ದರ್ಶನ ಭ್ರಮರಿಯಲ್ಲಿ ನಿಮ್ಮ ಮುಂದೆ ಅತಿಥಿಯಾಗಿ....

**೧. ಸಾಮಾನ್ಯ ಪ್ರೇಕ್ಷಕನಿಗೆ ನೃತ್ಯ ಮಾಧ್ಯಮ ಯಾವಾಗ ಮತ್ತು ಹೇಗೆ ಪರಿಣಾಮಕಾರಿಯಾಗಿ ಸಂವಹನವಾಗಬಲ್ಲುದು?**

ನೂರು ಮಾತಿಗಿಂತ ದೇಹಭಾಷೆ ಪರಿಣಾಮಕಾರಿ. ಎಲ್ಲಾ ವಿಷಯಗಳನ್ನು ಮಾತಿನಿಂದ ಹೇಳಲಿಕ್ಕಾಗುವುದಿಲ್ಲ. ಆಗ ಸೂಕ್ತವಾದ ದೇಹಭಾಷೆ ಸಂವಹನಕ್ಕೆ ಹೆಚ್ಚು ಸಹಕರಿಸುತ್ತದೆ. ಆದರೆ ಸಾಮಾನ್ಯ ಪ್ರೇಕ್ಷಕನಿಗೆ ನೃತ್ಯದ ಮೂಲಕ ಅನುಭವಗಳನ್ನು ಸಂವಹಿಸಬೇಕೆಂದಾದರೆ ಆಗ ಆಂಗಿಕ, ಸಾತ್ವಿಕದ ಬಂಧ ಮುಖ್ಯ. ಸಾತ್ವಿಕ ಇಲ್ಲದ ಆಂಗಿಕ ನಿರರ್ಥಕ. ಅಭಿನಯದ ಮೂಲಕ ಸಂವಹನ ಮಾಡುವುದಾದರೆ ಸತ್ವ ಎನ್ನುವುದು ಪ್ರಮುಖ. ವ್ಯಕ್ತಿಯು ತನ್ನ ಅಭಿನಯವನ್ನು ತಾನೇ ಮೊದಲು ಅನುಭವಿಸಬೇಕು. ಇಲ್ಲದೇ ಹೋದರೆ ಪ್ರೇಕ್ಷಕರಿಗೆ ತಲುಪುವುದಾದರೂ ಹೇಗೆ? ಆಗ ಆಂಗಿಕ ಭಾಷೆ ವ್ಯಾಯಾಮದಂತಾಗಿ ನಿರರ್ಥಕ ಆಗುತ್ತದೆ. ಪಾತ್ರದ ಅನುಭವ, ಲಕ್ಷಣಗಳನ್ನು ಅನುಭವಿಸುತ್ತಾ ಮಾಡಿದರೆ ಮಾತ್ರ, ಕಲಾವಿದ